# ಧ್ಯೇಯ ಕಮಲ

ಉತ್ತಿಷ್ಠ ಭಾರತ

ಮಾಸ ಪತ್ರಿಕೆ

ಏಪ್ರಿಲ್ 2011

ಸಂಪುಟ - 4 ಸಂಚಿಕೆ - 7

ಪ್ರಕಾಶಕರು
ಎಸ್. ಸುರೇಶ್ ಕುಮಾರ್

ಸಂಪಾದಕರು
ಎಂ.ಬಿ. ಭಾನುಪ್ರಕಾಶ್

ಸಂಪಾದಕ ಮಂಡಳಿ
ಡಾ॥ ಮಮ್ತಾಜ್ ಅಲಿಖಾನ್
ಗಣೇಶ ಯಾಜಿ

ಮುದ್ರಣ :
ರಾಷ್ಟ್ರೋತ್ಥಾನ ಮುದ್ರಣಾಲಯ,
ಕೇಶವ ಶಿಲ್ಪ, ಕೆಂಪೇಗೌಡ ನಗರ,
ಬೆಂಗಳೂರು - 560 019.

ವಾರ್ಷಿಕ ಚಂದಾ : 100 ರೂ.
ಬಿಡಿ ಪ್ರತಿ : 10 ರೂ.



ವಿವರಗಳಿಗೆ ಸಂಪರ್ಕಿಸಿ :
**ಧ್ಯೇಯಕಮಲ ಕನ್ನಡ ಮಾಸಪತ್ರಿಕೆ,**
**ಬಿಜೆಪಿ ರಾಜ್ಯ ಕಾರ್ಯಾಲಯ,**
ನಂ. 11, 12ನೇ ಮುಖ್ಯರಸ್ತೆ,
16ನೇ ಅಡ್ಡರಸ್ತೆ, ಮಲ್ಲೇಶ್ವರಂ ಪಶ್ಚಿಮ
ಬೆಂಗಳೂರು - 560 055.
ದೂ. : 080-22041976
ಫ್ಯಾಕ್ಸ್ : 080-23460398
Email: bjponline@gmail.com
ganeshyaji@yahoo.co.in


## ಸಂಪಾದಕೀಯ....

ಎಲ್ಲರಿಗೂ ಯುಗಾದಿಯ ಶುಭಾಶಯಗಳು

ಹೊಸ ಸಂವತ್ಸರದಲ್ಲಿ ನಾಡಿನೆಲ್ಲೆಡೆಗೂ ಶಾಂತಿ, ಸುಖ, ಸಮೃದ್ಧಿ ನೆಲೆಸಲೆಂದು ಹಾರೈಕೆ.

ರಾಜ್ಯದಲ್ಲಿ ಉಪಚುನಾವಣೆಗಳು ನಡೆದಿವೆ. ವಿರೋಧಿಗಳ ಅಪಪ್ರಚಾರದ ನಡುವೆಯೂ ಸರ್ಕಾರ ಕೈಗೊಂಡ ಜನಪರ ಯೋಜನೆಗಳ ಅರಿವು ಜನತೆಯ ಮನ ಪಟಲದಿಂದ ದೂರಾಗಿರಲಾರದೆಂಬ ಭರವಸೆ ನಮ್ಮದು. ಹೀಗಾಗಿ ಮತದಾರರು ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವರೆಂಬ ಆಶಯವನ್ನು ಎಲ್ಲರೂ ಹೊಂದಿದ್ದಾರೆ.

ಮುಂಬರುವ ತಿಂಗಳಲ್ಲಿ ಎಪಿಎಂಸಿ ಚುನಾವಣೆಗಳು ನಡೆಯಲಿದ್ದು ಸಹಕಾರಿ ವಲಯದಲ್ಲಿ ಪಕ್ಷದ ವರ್ಚಸ್ಸನ್ನು ವೃದ್ಧಿಸುವ ದೃಷ್ಟಿಯಲ್ಲಿ ಎಲ್ಲರೂ ಸಿದ್ಧಗೊಳ್ಳಬೇಕಾಗಿದೆ.

ಸಂಘಟನಾತ್ಮಕವಾಗಿಯೂ ಅನೇಕ ಚಟುವಟಿಕೆಗಳು ನಡೆಯುತ್ತಿವೆ. ವಿಭಾಗೀಯ ಮಟ್ಟದಲ್ಲಿ ಶಕ್ತಿಕೇಂದ್ರಗಳ ಪ್ರಮುಖರ ಸಭೆಗಳು ನಡೆದಿವೆ. ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ನಡೆದ ಬಿಜೆಪಿ ಸಮಾವೇಶದಲ್ಲಿ ನಿರ್ಣಯಿಸಿದಂತೆ ಅನುವರ್ತಿ ಹೆಜ್ಜೆಯಾಗಿ ನಡೆದ ವಿಭಾಗೀಯ ಸಭೆಗಳಲ್ಲಿ ಸಂಘಟನೆಗೆ ಹೆಚ್ಚಿನ ಒತ್ತು ನೀಡಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ನಮ್ಮ ನಡಿಗೆ ಶಕ್ತಿಕೇಂದ್ರದ ಕಡೆಗೆ, ಮನೆ-ಮನೆಗೆ ಬಿಜೆಪಿ ಕಾರ್ಯಕರ್ತ, ಮತಗಟ್ಟೆ ಸಮಿತಿ ಸದಸ್ಯರ ಸಮಾವೇಶ, ಬಿಜೆಪಿ ಸ್ಥಾಪನಾ ದಿವಸ, ಡಾ॥ ಅಂಬೇಡ್ಕರ್ ಜಯಂತಿ ಮುಂತಾದ ಕಾರ್ಯಕ್ರಮಗಳನ್ನು ಪಕ್ಷದ ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಮಟ್ಟದ ಅಭ್ಯಾಸವರ್ಗಗಳು, ಮಂಡಲ ಅಭ್ಯಾಸ ವರ್ಗಗಳು, ಮೋರ್ಚಾ ಅಭ್ಯಾಸ ವರ್ಗಗಳು ಆಯೋಜಿಸಲ್ಪಟ್ಟಿದ್ದು ಸಂಘಟನೆಯ ಬೇರುಗಳು ಗಟ್ಟಿಗೊಳ್ಳಲು ಬೇಕಾದ ಪೂರ್ವತಯಾರಿ ಸಿದ್ಧವಾಗಿದೆ.

ವಿಶೇಷವಾಗಿ ಡಾ॥ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಕಾರ್ಯಕರ್ತರ ಜವಾಬ್ದಾರಿ ಮಹತ್ವದ್ದಾಗಿದೆ. ಸೇವಾಬಸ್ತಿಗಳಲ್ಲಿ ನಮ್ಮ ಕಾರ್ಯಕ್ರಮಗಳನ್ನು ಜೋಡಿಸಿಕೊಳ್ಳುವುದು ಅವಶ್ಯಕ. ದೀನ-ದಲಿತರ ತೀವ್ರತಮ ಅವಶ್ಯಕತೆಯೆಡೆಗೆ ಗಮನಹರಿಸಿ ಸಮಾಜ ಬಂಧುಗಳನ್ನು ಜೊತೆಗೆ ಕೊಂಡೊಯ್ಯುವ ಕಾರ್ಯವಾಗಬೇಕು. ಹಾಗಾದಾಗ ಮಾತ್ರ ಡಾ॥ ಅಂಬೇಡ್ಕರ್‌ರವರ ಆಶಯಗಳೊಂದಿಗೆ ನಾವೂ ಹೆಜ್ಜೆ ಜೋಡಿಸಿದಂತಾಗುತ್ತದೆ. ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗದವರಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಆ ಮಹಾಚೇತನಕ್ಕೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ಸಂಘಟನಾ ಚಟುವಟಿಕೆಗಳಿಗೆ ಋತುಮಾನಗಳ ಬಂಧನವಿಲ್ಲ. ಬಿರುಬೇಸಿಗೆಯ ತಿಂಗಳಲ್ಲೂ ನಮ್ಮೆಲ್ಲ ಯೋಜಿತ ಕಾರ್ಯಕ್ರಮಗಳು ನಿಯಮಿತವಾಗಿ ನಡೆಯುವುದು ಅಪೇಕ್ಷಣೀಯ.

ಇಂತಿ ನಿಮ್ಮವ,
(ಎಂ.ಬಿ.ಭಾನುಪ್ರಕಾಶ್)

## ಒಳಪುಟಗಳಲ್ಲಿ..........


ಲೋಕಾರ್ಪಣೆ...........................4

ಪ್ರಥಮ ಆದ್ಯತೆ.........................6

ಸಮಾವೇಶಗಳು........................7

ಡಾ॥ ಅಂಬೇಡ್ಕರ್.....................12

ಸಂಘ ಕಾರ್ಯ.........................14

ಜೈವಿಕ ಇಂಧನ......................20

ಕೃಷಿ ಬಜೆಟ್...........................21



**Declaration in Form No. IV**

| | | |
|---|---|---|
| Name of the Magazine | : | Dhyeya Kamala |
| Periodicity | : | Monthly |
| Language | : | Kannada |
| Name of the Publisher, Printer & Owner | : | Sri S. Suresh Kumar<br>Sri Bhavoo Rao Deshpande - Smaraka Bhavana,<br>No. 1/1, 8th Main,<br>6th Cross, Malleshwaram,<br>Bangalore 560003. |
| Printing Press | : | Rastrothana Mudranalaya,<br>Keshavashilpa,<br>Kempegowdanagar,<br>Bangalore 560019. |
| Name of the Editor | : | Sri M.B. Bhanuprakash |


# ಸೇವಾಭಾರತಿ ಮನೆಗಳ ಲೋಕಾರ್ಪಣೆ

ನೆರೆಯ ಭೀಕರ ಅಬ್ಬರಕ್ಕೆ ತಮ್ಮದೆಲ್ಲವನ್ನು ಕಳೆದುಕೊಂಡಿದ್ದ ಗದಗ ಜಿಲ್ಲಾ ಹೊಳೆ ಆಲೂರು ಜನರ ಪಾಲಿಗೆ ಬದುಕು ಬರಿದಾದಾಗ ಭರವಸೆಯಾಗಿ ಬಂದದ್ದು ಸೇವಾಭಾರತಿ. ಸರ್ಕಾರದ ನೆರವಿನೊಡನೆ ನೆರೆ ಸಂತ್ರಸ್ತರಿಗಾಗಿ ನಿರ್ಮಿಸಲಾದ 473 ಮನೆಗಳ ಲೋಕಾರ್ಪಣೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮಾನ್ಯಶ್ರೀ ಮೋಹನ್‌ಜೀ ಭಾಗ್ವತ್ ಅವರ ಹಸ್ತದಿಂದ ನೆರವೇರುವುದರ ಮೂಲಕ ಸೇವಾಭಾರತಿಯ ಸೇವೆಗೆ ಮತ್ತೊಂದು ಗರಿ ಮೂಡಿತು. ಕರ್ನಾಟಕ ಕೇಸರಿ ದಿ. ಜಗನ್ನಾಥರಾವ್ ಜೋಶಿ ಸ್ಮರಣಾರ್ಥ ನಿರ್ಮಾಣವಾಗಿರುವ ಜಗನ್ನಾಥನಗರ ನವಗ್ರಾಮ ಹೊಳೆ ಆಲೂರ ಜನರ ಬವಣೆ ಶಾಶ್ವತವಾಗಿ ನಿವಾರಿಸಿದೆ. ಮಲಪ್ರಭಾ ಹಾಗೂ ಬೆಣ್ಣೆಹಳ್ಳಗಳ ಪ್ರವಾಹ ಇಲ್ಲಿನ ಜನರ ಬದುಕನ್ನು ಮೂರಾಬಟ್ಟೆಯಾಗಿಸಿತ್ತು. 2009ರ ಪ್ರವಾಹದಲ್ಲಂತೂ ಗ್ರಾಮ ಅಕ್ಷರಶಃ ಮುಳುಗಿತ್ತು. ಸೇವಾಭಾರತಿಯ ಸಂಕಲ್ಪದೊಡನೆ ಕಡೆಗೂ ಇಲ್ಲಿನ ಜನರಿಗೆ ಶಾಶ್ವತ ಸೂರಿನ ಭಾಗ್ಯ ಲಭಿಸಿದೆ. ಇದರ ಸಾರ್ಥಕ ಭಾವ ನೆರೆದ ಗ್ರಾಮಸ್ಥರ ಮುಖದಲ್ಲಿ ಎದ್ದು ಕಾಣುತ್ತಿತ್ತು.

**ಆದರ್ಶದ ಬಾಳಾಗಲಿ:** ಹೊಳೆ ಆಲೂರು ಗ್ರಾಮಸ್ಥರಿಗೆ ಮತ್ತೊಮ್ಮೆ ಹೊಸದಾಗಿ ಬದುಕು ಕಟ್ಟಿಕೊಳ್ಳುವ ಅವಕಾಶ ಲಭಿಸಿದೆ. ಈ ಹಿಂದಿನ ಕಹಿ ಘಟನೆಗಳನ್ನು ಮರೆತು ಸೌಹಾರ್ದಪೂರ್ಣ, ಸಮನ್ವಯ ಬದುಕು ರೂಪಿಸಿಕೊಳ್ಳುವಂತೆ ಸರಸಂಘಚಾಲಕ ಮಾನ್ಯಶ್ರೀ ಮೋಹನ್‌ಜೀ ಭಾಗ್ವತ್ ಕರೆಯಿತ್ತರು. ಸೇವೆ ಅತ್ಯಂತ ಸಾರ್ಥಕವಾದ ಕೈಂಕರ್ಯವಾಗಿದ್ದು ಭಗವಾನ ಬುದ್ಧ ಸೇವೆಯ ವಿಚಾರಗಳಿಗೆ ಮೇರು ಆದರ್ಶನಾಗಿದ್ದನು. ಸೇವೆಯ ಆದರ್ಶವನ್ನು ಅಳವಡಿಸಿಕೊಂಡು ಸೇವಾಭಾರತಿ ರಾಷ್ಟ್ರಾದ್ಯಂತ ಲಕ್ಷಾಂತರ ಸೇವಾ ಚಟುವಟಿಕೆಗಳನ್ನು ನಡೆಸುತ್ತಿದೆ. ಇಲ್ಲಿ ನವಗ್ರಾಮ ನಿರ್ಮಾಣದ ಮೂಲಕ ಸೇವಾಭಾರತಿ ತನ್ನ ಕಾರ್ಯಕ್ಕೆ ಮತ್ತಷ್ಟು ಬಲ ತುಂಬಿದೆ ಎಂದು ಅವರು ಶ್ಲಾಘಿಸಿದರು.

ಮನೆಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಸರಸಂಘಚಾಲಕ ಮಾನ್ಯಶ್ರೀ ಮೋಹನಜೀ ಭಾಗ್ವತ್ ಈ ಗ್ರಾಮಕ್ಕೆ ಜಗನ್ನಾಥರಾವ ಜೋಶಿಯವರ ಹೆಸರನ್ನು ಇಡುವುದರ ಮೂಲಕ ಸಾರ್ಥಕ ಕಾರ್ಯ ಮಾಡಲಾಗಿದೆ. ಈ ಗ್ರಾಮದವರು ದೇಶಕ್ಕೆ ಆದರ್ಶವಾದ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಭೌತಿಕ ಅಭಿವೃದ್ಧಿಯಿಂದ ಮಾತ್ರ ಗ್ರಾಮದ ಸಮಗ್ರ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಗ್ರಾಮವನ್ನು ಆದರ್ಶವಾಗಿ ರೂಪಿಸುವುದು ಹಾಗೂ ಅದಕ್ಕೆ ಶಕ್ತಿ ತುಂಬುವುದು ಗ್ರಾಮಸ್ಥರಿಂದಲೇ ಸಾಧ್ಯ. ದೇಶಕ್ಕೆ ಬೇಕಾಗಿರುವುದನ್ನು ಗ್ರಾಮಗಳು ನೀಡುತ್ತಿವೆ. ಎಲ್ಲ ಮಹಾಪುರುಷರು, ಸಂತ ಮಹಂತರು ಗ್ರಾಮಗಳಲ್ಲೇ ಜನ್ಮ ತಾಳಿ ದೇಶಕ್ಕೆ ಬೆಳಕಾದರು ಎಂದು ಶ್ರೀ ಭಾಗ್ವತ್‌ರು ಗ್ರಾಮ ಜೀವನದ

ಮಹತ್ವವನ್ನು ಅನಾವರಣಗೊಳಿಸಿದರು.

ಮಾದರಿ ರಾಜ್ಯ: ನೆರೆ ಸಂತ್ರಸ್ತರಿಗಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಶಾಶ್ವತ ಪುನರ್ವಸತಿ ಒದಗಿಸುವುದರ ಮೂಲಕ ರಾಜ್ಯ ಸರ್ಕಾರ ಹೊಸ ದಾಖಲೆಬರೆದಿದೆ ಎಂದು ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಹೇಳಿದರು. ಅದಾಗ್ಯೂ ನೆರೆ ಪರಿಹಾರ ವಿಳಂಬವಾಯಿತು ಎಂಬ ಆರೋಪಗಳು ಕೆಲವರಿಂದ ಕೇಳಿಬಂದಿದೆ. ಆದರೆ ಗುಜರಾತ್ ಭೂಕಂಪ ಹಾಗೂ ತಮಿಳುನಾಡು ಸುನಾಮಿ ದುರಂತದ ನಂತರ ಅಲ್ಲಿ ಪರಿಹಾರ ಒದಗಿಸಲು 7 ವರ್ಷಗಳೇ ಬೇಕಾಯಿತು ಎಂಬುದನ್ನು ಟೀಕಾಕಾರರು ನೆನಪಿಸಿಕೊಳ್ಳಬೇಕು. ರಾಜ್ಯ ಎಲ್ಲ ರಂಗಗಳಲ್ಲಿಯೂ ಮುಂಚೂಣಿಯಲ್ಲಿದ್ದು ರೈತರಿಗೆ ನೆರವಾಗುವ ದೃಷ್ಟಿಯಿಂದ ದೇಶದಲ್ಲಿಯೇ ಮೊದಲಬಾರಿಗೆ ಕೃಷಿ ಬಜೆಟ್ ಮಂಡಿಸಲಾಗಿದೆ. ಭಾಗ್ಯಲಕ್ಷ್ಮೀ ಸೇರಿದಂತೆ ಅನೇಕ ಜನಮುಖಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಮುಂಬರುವ ಮೇ ತಿಂಗಳಲ್ಲಿ ನರಗುಂದದಲ್ಲಿ ಈ ಭಾಗದ ನೆರೆ ಸಂತ್ರಸ್ತ ಫಲಾನುಭವಿಗಳ ಸಮಾವೇಶ ನಡೆಸಿ ಅವರ ದೂರು ದುಮ್ಮಾನಗಳನ್ನು ಆಲಿಸಲಾಗುವುದು ಎಂದರು. ಜಗನ್ನಾಥರಾವ ಜೋಶಿ ಸ್ಮರಣಾರ್ಥ 1 ಕೋಟಿ ರೂ. ವೆಚ್ಚದಲ್ಲಿ ಭವನವೊಂದನ್ನು ನರಗುಂದದಲ್ಲಿ ನಿರ್ಮಿಸುವುದಾಗಿ ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಪ್ರಕಟಿಸಿದರು. ●

## ವಿಧಾನಸಭಾ ಉಪಚುನಾವಣೆ-ತೀವ್ರಗೊಂಡ ಪ್ರಚಾರ

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆಗಳಲ್ಲಿ 3 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ಖಚಿತ ಎಂದು ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ನುಡಿದಿದ್ದಾರೆ.

ರಾಜ್ಯದಲ್ಲಿ ಮುರೂ ವರ್ಷಗಳ ಕಾಲ ಆಡಳಿತ ನಡೆಸಿದ್ದು, ಉಳಿದ ಎರಡು ವರ್ಷಗಳ ಕಾಲ ಆಡಳಿತ ಅಡೆತಡೆಗಳಿಲ್ಲದೆ ನಡೆಯಲಿದೆ. ಅಧಿಕಾರಕ್ಕಾಗಿ ವಿರೋಧ ಪಕ್ಷಗಳು ಇನ್ನೂ ಎರಡು ವರ್ಷಗಳ ಕಾಲ ಹೋರಾಟ ನಡೆಸುವುದರಲ್ಲೆ ಸಮಯ ವ್ಯರ್ಥಮಾಡಬೇಕಿದೆ ಎಂದು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಕಾಂಗ್ರೆಸ್ ಮತ್ತು ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಬಂಗಾರಪೇಟೆ ಹಾಗೂ ಚನ್ನಪಟ್ಟಣಗಳಿಗೆ ಸಂಸದೆ ಶ್ರೀಮತಿ ಹೇಮಾಮಾಲಿನಿ ತೀವ್ರ ಪ್ರಚಾರ ನಡೆಸಿದರು. ಅಪಾರ ಜನ ಸೇರಿದ ಈ ಸಭೆಗಳಲ್ಲಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ರಾಜ್ಯಾಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ, ಪಕ್ಷದ ಪ್ರಮುಖರು ಹಾಗೂ ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಚನ್ನಪಟ್ಟಣ, ಜಗಳೂರು ಹಾಗೂ ಬಂಗಾರಪೇಟೆ ಈ ಮೂರು ಕ್ಷೇತ್ರಗಳಲ್ಲಿ ಚುನಾವಣೆ ನಡೆಯಲಿದ್ದು ಬಿಜೆಪಿ ವತಿಯಿಂದ ಜಗಳೂರಿನಲ್ಲಿ ಶ್ರೀ ಎಸ್.ಎ.ರಾಮುಚಂದ್ರ, ಚನ್ನಪಟ್ಟಣದಲ್ಲಿ ಶ್ರೀ ಸಿ.ಪಿ. ಯೋಗೀಶ್ವರ್ ಹಾಗೂ ಬಂಗಾರಪೇಟೆ ಕ್ಷೇತ್ರದಲ್ಲಿ ಶ್ರೀ ನಾರಾಯಣಸ್ವಾಮಿ ಸ್ಪರ್ಧಿಸಿದ್ದಾರೆ.

ಮಾನ್ಯ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಶ್ರೀ ಅನಂತ್‌ಕುಮಾರ್, ಶ್ರೀ ಕೆ.ಎಸ್.ಈಶ್ವರಪ್ಪ, ಸಚಿವರು, ಪಕ್ಷದ ಪ್ರಮುಖರು ಮೂರು ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ಕೈಗೊಂಡಿದ್ದು ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದೆ. ಬಿಜೆಪಿ ಸರ್ಕಾರದ ಜನಪರ ಕಾರ್ಯಕ್ರಮಗಳು, ರೈತಪರ ಬಜೆಟ್ ಜನರನ್ನು ಬಿಜೆಪಿಯೆಡೆಗೆ ಸೆಳೆಯುವಲ್ಲಿ ಸಹಕಾರಿಯಾಗಿವೆ. ಚುನಾವಣೆ ಏಪ್ರಿಲ್ 9ರಂದು ನಡೆಯಲಿದೆ. ●

## ಬಿಜೆಪಿ ಯುವ ಮೋರ್ಚಾ ಪ್ರಶಿಕ್ಷಣ ವರ್ಗ

ಬೆಂಗಳೂರಿನ ನಾಗವಾರದಲ್ಲಿ ಮಾರ್ಚ್ 25, 26 ಹಾಗೂ 27ರಂದು ರಾಜ್ಯ ಬಿಜೆಪಿ ಯುವ ಮೋರ್ಚಾ ಪ್ರಶಿಕ್ಷಣ ವರ್ಗ ಸಂಪನ್ನಗೊಂಡಿತು. ಪ್ರಶಿಕ್ಷಣವರ್ಗದಲ್ಲಿ ರಾಜ್ಯ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು, ರಾಜ್ಯ ಕಾರ್ಯಕಾರಿಣಿ ಸದಸ್ಯರು, ಜಿಲ್ಲಾ ಅಧ್ಯಕ್ಷರು ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು.

ಪ್ರಶಿಕ್ಷಣವರ್ಗದ ಉದ್ಘಾಟನೆಯನ್ನು ಸಚಿವ ಶ್ರೀ ಆರ್. ಅಶೋಕ ನೆರವೇರಿಸಿದರು. ಅಧ್ಯಕ್ಷತೆಯನ್ನು ಯುವ ಮೋರ್ಚಾ ರಾಜ್ಯಾಧ್ಯಕ್ಷ ಶ್ರೀ ಸುನೀಲ್‌ಕುಮಾರ್ ವಹಿಸಿದ್ದರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ಭಾನುಪ್ರಕಾಶ್ ಉಪಸ್ಥಿತರಿದ್ದರು.

ಮೂರು ದಿನಗಳಲ್ಲಿ ಒಟ್ಟು 12 ಅವಧಿಗಳಲ್ಲಿ ಪ್ರಶಿಕ್ಷಣವರ್ಗ ನಡೆಯಿತು. ಮೊದಲನೇ ಅವಧಿಯಲ್ಲಿ "ಬಿಜೆಪಿ ಬೆಳೆದು ಬಂದ ದಾರಿ" ಎಂಬ ವಿಷಯವಾಗಿ ಸಚಿವ ಶ್ರೀ ಸುರೇಶ್‌ಕುಮಾರ್ ವಿವರಿಸಿದರು. ಎರಡನೇ ಅವಧಿಯಲ್ಲಿ ನಮ್ಮ ಕಾರ್ಯಪದ್ಧತಿ ಬಗ್ಗೆ ಶ್ರೀ ಭಾನುಪ್ರಕಾಶ್ ಮಾತನಾಡಿದರು. ಮೂರನೇ ಅವಧಿಯಲ್ಲಿ ಟೀಮ್‌ವರ್ಕ್ ವಿಷಯವಾಗಿ ಖ್ಯಾತ ತರಬೇತುದಾರ ಶ್ರೀ ಚೇತನ್‌ರಾಮ್ ಮಾಹಿತಿ ನೀಡಿದರು. ನಂತರದ ಅವಧಿಯಲ್ಲಿ ಶ್ರೀ ಚಕ್ರವರ್ತಿ ಸೂಲಿಬೆಲೆಯವರು ಭಾರತಮಾತಾ ಪೂಜನ್ ಎಂಬ ವಿಷಯವಾಗಿ ಗೋಷ್ಠಿ ನಡೆಸಿದರು. ಶ್ರೀಯುತ ಪಿ.ವಿ. ಕೃಷ್ಣ ಭಟ್ಟರು ಸಾಂಸ್ಕೃತಿಕ ರಾಷ್ಟ್ರವಾದದ ಬಗ್ಗೆ ಮಾತನಾಡಿದರು. 6ನೇ ಅವಧಿಯಲ್ಲಿ ಧ್ಯೇಯವಾದಿ ಕಾರ್ಯಕರ್ತ ಎಂಬ ವಿಷಯದ ಬಗ್ಗೆ ಸಂಸದ ಶ್ರೀ ಅನಂತಕುಮಾರ್ ಹೆಗಡೆ ವಿಶ್ಲೇಷಿಸಿದರು. ನಂತರದ ಅವಧಿಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಧರ್ಮೇಂದ್ರ ಪ್ರಧಾನ್‌ರವರು ಯುಪಿಎ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ತಿಳಿಸಿದರು. ಯುವ ಜನತೆ – ಯುವ ನಾಯಕತ್ವ ವಿಷಯದ ಬಗ್ಗೆ ರಾಜ್ಯ ಎಬಿವಿಪಿ ಅಧ್ಯಕ್ಷ ಶ್ರೀ ವಸಂತಕುಮಾರ್ ಮಾತನಾಡಿದರು. ಹೋರಾಟದ ವಿವಿಧ ಮಜಲುಗಳ ಬಗ್ಗೆ ಶ್ರೀ ಸಿ.ಟಿ. ರವಿಯವರು ಹಾಗೂ ಪಕ್ಷದ ಸಂಘಟನೆಯಲ್ಲಿ ಆಧುನಿಕ ವ್ಯವಸ್ಥೆ ಬಗ್ಗೆ ಶ್ರೀ ಎಸ್. ಪ್ರಕಾಶ್ ವಿವರಿಸಿದರು. ಭಾಷಣ ಕಲೆಯ ಬಗ್ಗೆ ಶ್ರೀ ಮಾಲತೇಶ ಭಟ್ ಮಾತನಾಡಿದರು. ಮೂರು ದಿನಗಳ ಪ್ರಶಿಕ್ಷಣವರ್ಗ ಯುವ ಕಾರ್ಯಕರ್ತರಲ್ಲಿ ಪಕ್ಷದ ಸೈದ್ಧಾಂತಿಕ ನಿಲುವಿನ ಮೇಲೆ ಹೆಚ್ಚಿನ ಬೆಳಕು ಬೀರಿತಲ್ಲದೆ ಮುಂದಿನ ದಿನಗಳಲ್ಲಿ ಯುವ ಮೋರ್ಚಾವನ್ನು ಹೆಚ್ಚಿನ ದೃಢ ಹೆಜ್ಜೆಯೊಂದಿಗೆ ಮುನ್ನಡೆಸುವಲ್ಲಿ ಉತ್ಸಾಹ ತುಂಬಿತು. ●

ಸಾಂದರ್ಭಿಕ

# ಬಿಜೆಪಿಗೆ ಪಕ್ಷ ಸಂಘಟನೆಯೇ ಪ್ರಥಮ ಆದ್ಯತೆ

- ಎಸ್. ಶಾಂತಾರಾಮ್

ರಾಜಕೀಯ ಪಕ್ಷವೊಂದು ರಾಜ್ಯ ಅಥವಾ ದೇಶದ ಬಹುತೇಕ ಮತದಾರರ ಮನಸ್ಸಿನಲ್ಲಿ ನೆಲೆ ನಿಲ್ಲುವುದು ಸಾಧ್ಯವೇ ಇಲ್ಲವೇನೋ ಎನ್ನುವ ಕಳವಳ ರಾಜಕೀಯ ರಂಗದಲ್ಲಿ ಕೆಲವು ಬಾರಿ ಮೂಡುವುದುಂಟು.ಕೆಲವು ಬಾರಿ ರಾಷ್ಟ್ರವ್ಯಾಪಿಯಾಗಿ ಬೆಳೆದು ನಿಂತ ಪಕ್ಷವೊಂದು ಕ್ರಮೇಣ ಕೆಲವು ರಾಜ್ಯಗಳಿಗೆ ಸೀಮಿತವಾಗಬಹುದು.ಚುನಾವಣೆ ಗೆಲ್ಲುವುದು ಮಾತ್ರವೇ ಯಾವುದೇ ಪಕ್ಷದ ಉದ್ದೇಶವಲ್ಲ,ಅದಾಗಲೂ ಬಾರದು.ಕೇವಲ ಚುನಾವಣೆ ಗೆಲ್ಲಲು ಎದುರಾಳಿ ದುರ್ಬಲವಾಗಿದ್ದರೂ ಸಾಕು,ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ಪಕ್ಷ ಎಲ್ಲೆಡೆ ಅಸ್ತಿತ್ವ ಹೊಂದಿದಂತೆಯೂ ಅಲ್ಲ.ಪಕ್ಷ ಖಾಯಂ ಆಗಿ ಶಕ್ತಿಶಾಲಿಯಾಗಿದೆ ಎನ್ನಲು ಚುನಾವಣೆಯಲ್ಲಿ ಗಳಿಸುವ ಜಯವೇ ಮಾನದಂಡವಾದರೆ ,ಆಗ ಯಾವುದೇ ಕಾರಣಕ್ಕೆ ಉಂಟಾಗುವ ಸೋಲಿನಿಂದ ಮತ್ತೆ ಚೇತರಿಸಿಕೊಳ್ಳಲು ಆ ಪಕ್ಷ ತೀವ್ರ ಸೆಣಸಾಟ ನಡೆಸಬೇಕಾಗುತ್ತದೆ.ಇಡೀ ದೇಶದಲ್ಲಿ ಏಕಮೇವ ಪಕ್ಷವಾಗಿ ಮೆರೆದ ಕಾಂಗ್ರೆಸ್ ಪಕ್ಷವನ್ನು ಇದಕ್ಕೆ ಉದಾಹರಿಸಬಹುದು.

ಪಕ್ಷದ ಸಂಘಟನೆ ಮತ್ತು ಸರ್ಕಾರ ಇವೆರಡರ ಸಮತೋಲನದಿಂದಲೇ ರಾಜಕೀಯ ಪಕ್ಷವೊಂದು ತನ್ನ ಉದ್ದೇಶ ಈಡೇರಿಸಿಕೊಳ್ಳಲು ಸಾಧ್ಯವಿದೆ.ಸರ್ಕಾರ ರಚನೆಯಾದ ಮಾತ್ರಕ್ಕೆ ಸಂಘಟನೆಯ ಉದ್ದೇಶ ಈಡೇರಿದೆ ಎಂದು ಸುಮ್ಮನೆ ಕೂರುವಂತಿಲ್ಲ.ಏಕೆಂದರೆ ಪಕ್ಷದ ಅಸ್ತಿತ್ವ ಶಾಶ್ವತ.ಆದರೆ ಸರ್ಕಾರ ಅಸ್ತಿತ್ವದಲ್ಲಿರುವುದು ,ಬಿಡುವುದು ರಾಜ್ಯದ ಮತದಾರರ ಒಲವು -ನಿಲುವನ್ನು ಅವಲಂಬಿಸಿರುತ್ತದೆ.ಪಕ್ಷದ ಸಂಘಟನೆಯು ಕಾರ್ಯಕರ್ತರ ನಂಬಿಕೆ ಮತ್ತು ಬದ್ಧತೆಯ ಮೇಲೆ ಅವಲಂಬಿಸಿರುತ್ತದೆ.ಭಾರತೀಯ ಜನತಾ ಪಕ್ಷದ ಕಾರ್ಯಕರ್ತರಿಗೆ ಈ ವಿಷಯದಲ್ಲಿ ಯಾವುದೇ ಗೊಂದಲ ಇಲ್ಲ.ಅಲ್ಲಲ್ಲಿ ಕೆಲವು ಸಮಸ್ಯೆಗಳು ಎದುರಾದರೂ , ಪಕ್ಷದ ಕಾರ್ಯಕರ್ತರಿಗೆ ಪಕ್ಷದ ತತ್ವ , ಸಿದ್ಧಾಂತದ ಬಗ್ಗೆ ಇರುವ ನಂಬಿಕೆ ಮತ್ತು ಬದ್ಧತೆಯಿಂದ ಪರಿಹಾರ ಕಂಡುಕೊಳ್ಳುವ ಅವಕಾಶ ಬಿಜೆಪಿಗೆ ಇದೆ.

ಇದಕ್ಕಿಂತ ಹೆಚ್ಚಾಗಿ ಪಕ್ಷದಿಂದಾಗಿಯೇ ಸರ್ಕಾರ ರಚನೆ ಸಾಧ್ಯವಾಗುತ್ತದೆ. ಪಕ್ಷ ದುರ್ಬಲವಾಗಿದ್ದರೂ ಅದೇ ಪಕ್ಷ ನೇರವಾಗಿ ಜನರಿಂದ ಆಯ್ಕೆಯಾಗಿ ಸರ್ಕಾರ ರಚಿಸುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ.ಆದ್ದರಿಂದಲೇ ಇಂದು ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತು ಅವಶ್ಯವಾಗಿದೆ.ಅಧಿಕಾರ ಇರಲಿ, ಇಲ್ಲದಿರಲಿ ಪಕ್ಷದ ಸಂಘಟನೆಗೆ ಗಮನಹರಿಸಿ , ಸರ್ಕಾರದ ಜೊತೆ ಸಮಾನಾಂತರವಾಗಿ ಆದರೆ ಸಮನ್ವಯದಿಂದಲೇ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಗಳಿಸುವುದು , ಬಿಜೆಪಿಯಂತಹ ಕಾರ್ಯಕರ್ತ ಆಧಾರಿತ ಪಕ್ಷಕ್ಕೆ ಮಾತ್ರ ಸಾಧ್ಯವಿದೆ.ಆದ್ದರಿಂದಲೇ ಸಂಘಟನೆಯನ್ನು ಗಟ್ಟಿಗೊಳಿಸುವ ಕಾರ್ಯ ನಿರಂತರ .ಪಕ್ಷ ಅಧಿಕಾರದಲ್ಲಿದ್ದರೂ , ಸಂಘಟನೆಯನ್ನು ಸದೃಢಗೊಳಿಸುವ ಕಾರ್ಯ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಇರಬೇಕಾದ ಪ್ರಕ್ರಿಯೆ.ಇದರ ಬಲದಿಂದಲೇ ಪಕ್ಷ ಕಳೆದ ಮೂರು ವರ್ಷಗಳಿಂದಲೂ ಎದುರಾದ ಅನೇಕ ಉಪ ಚುನಾವಣೆಗಳಲ್ಲಿ ಜಯಗಳಿಸಿದೆ.ಸಂಘಟನೆಯ ಶಕ್ತಿ ಕಳೆದ ಹತ್ತು ವರ್ಷಗಳಲ್ಲಿ ಗಮನಾರ್ಹವಾಗಿ ಹೆಚ್ಚಿರುವುದರಿಂದಲೇ ಬಿಜೆಪಿ ರಾಜ್ಯವ್ಯಾಪಿ ಜನಮನ್ನಣೆ ಗಳಿಸುವುದು ಸಾಧ್ಯವಾಗಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರಕ್ಕೆ 1000 ದಿನಗಳು ಪೂರೈಸಿದಾಗ ನಡೆದ ಬೂತ್‌ಮಟ್ಟದ ಕಾರ್ಯಕರ್ತರ ಸಮಾವೇಶವು ಪಕ್ಷದ ಸಂಘಟನೆ ಹೇಗೆ ವ್ಯವಸ್ಥಿತವಾಗಿದೆ ಎನ್ನುವುದರ ಸಂಕೇತವಾಗಿತ್ತು.ಪ್ರತೀ ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಪಕ್ಷದ ಕಾರ್ಯಕರ್ತರಿಗೆ ಇಂತಹ ಸಮಾವೇಶದ ಕಲ್ಪನೆಯನ್ನು ಮನಸ್ಸಿನಲ್ಲಿ ಬಿತ್ತಿ ಅದಕ್ಕೆ ಪೂರಕವಾಗಿ ಸಮಾವೇಶ ಸಂಘಟಿಸುವುದು ಸಾಮಾನ್ಯ ಕೆಲಸವೇನಲ್ಲ.ಆದರೆ ಇದು ತನಗೆ ಮಾತ್ರ ಸಾಧ್ಯ ಎನ್ನುವುದನ್ನು ಬಿಜೆಪಿ ಪ್ರದರ್ಶಿಸಿದೆ.ಲಕ್ಷಾಂತರ ಕಾರ್ಯಕರ್ತರು ಒಂದೆಡೆ ಸೇರಿದರೂ ವ್ಯವಸ್ಥೆಯಲ್ಲಿ ಯಾವುದೇ ಲೋಪಗಳಾಗದೇ ಇರುವಂತೆ ಗಮನಹರಿಸುವುದೂ ಕೂಡಾ ಬಿಜೆಪಿಗೆ ಸಾಧ್ಯ ಎನ್ನುವುದನ್ನೂ ಈ ಸಮಾವೇಶ ಸಾಬೀತುಮಾಡಿತು.ಈ ಸಮಾವೇಶವು ಸರ್ಕಾರದ ಶಕ್ತಿ ಪ್ರದರ್ಶನಕ್ಕೆ ಏರ್ಪಾಡಾಗಿರಲಿಲ್ಲ.ಅಥವಾ ಸರ್ಕಾರವೇ ಏರ್ಪಡಿಸಿದ್ದ ಸಮಾವೇಶವೂ ಅದಾಗಿರಲಿಲ್ಲ.ಆದರೆ ಬಿಜೆಪಿ ಸಂಘಟನೆಯಾಗಿ ಹೇಗೆ ಕಾರ್ಯ ನಿರ್ವಹಿಸುತ್ತದೆ ಎನ್ನುವುದರ ಅರಿವು ಇಲ್ಲದ ಮಾಧ್ಯಮ ವಿಶ್ಲೇಷಕರು ಮಾತ್ರ ಈ ಸಮಾವೇಶವನ್ನು ಸರ್ಕಾರದ ದೃಷ್ಟಿಕೋನದಿಂದಲೇ ನೋಡಿದವು.ಸರ್ಕಾರ ಇಲ್ಲದೇ ಇದ್ದಿದ್ದರೂ ಇಂತಹ ಸಮಾವೇಶವನ್ನು ಯಶಸ್ವಿಯಾಗಿ ಸಂಘಟಿಸುವುದು ಬಿಜೆಪಿಗೆ ಸಿದ್ಧಿಸಿರುವ ಕಲೆ ಎನ್ನುವುದು ಮಾಧ್ಯಮಗಳ ವಿಶ್ಲೇಷಣೆಗೆ ನಿಲುಕದ್ದಾಗಿತ್ತು.

ಅನ್ಯ ಪಕ್ಷಗಳಿಗೆ ಚುನಾವಣೆಗಳನ್ನು ಎದುರಿಸುವುದೇ ಏಕೈಕ ಗುರಿ.ಹೀಗಾಗಿ ಆ ಸಂಘಟನೆಗಳು ಸಾರ್ವತ್ರಿಕವಾಗಿ ಘೋಷಿಸುವ ಸದಸ್ಯತ್ವ ಅಭಿಯಾನ ಬಿಟ್ಟರೆ ಉಳಿದಂತೆ ಸಂಘಟನಾತ್ಮಕವಾಗಿ ನಡೆಯುವ ಚಟುವಟಿಕೆಗಳಿಗೆ ಅಷ್ಟಾಗಿ ಪ್ರಚಾರ ನೀಡುವುದಿಲ್ಲ.ಏಕೆಂದರೆ ಉಳಿದಂತೆ ನಡೆಯುವ ಯಾವುದೇ ಚಟುವಟಿಕೆಗಳೂ ಸಂಘಟನಾತ್ಮಕವಾಗಿ ಮಹತ್ವದ ಸಂಗತಿಗಳೇ ಆಗಿರುವುದಿಲ್ಲ.ಚುನಾವಣೆ ಬಂದಾಗ ಸಕ್ರಿಯವಾಗುವ ಪಕ್ಷಗಳಿಗೆ ಬಿಜೆಪಿಯಂತೆ ಸಂಘಟನೆಯನ್ನು ನಿರಂತರವಾಗಿ ಜೀವಂತವಾಗಿಡಬೇಕಾದ ಅನಿವಾರ್ಯತೆಯೂ ಇಲ್ಲ.ಈ ಕಾರಣದಿಂದಾಗಿಯೇ ಬಿಜೆಪಿ ಇಂದು ಇತರ ಪಕ್ಷಗಳಿಗಿಂತ ಭಿನ್ನವಾಗಿ ಸಾರ್ವಜನಿಕರಲ್ಲಿ ಗುರ್ತಿಸಲ್ಪಟ್ಟಿದೆ.

ರಾಜ್ಯದಲ್ಲಿ ಸರ್ಕಾರವಿರುವ ಕಾರಣ ಇದುವರೆಗೆ ನಡೆದ ಅನೇಕ ಉಪ ಚುನಾವಣೆಗಳಲ್ಲಿ ಪಕ್ಷ ಸಕ್ರಿಯವಾಗಿ ಭಾಗವಹಿಸಿದೆ.ಪಕ್ಷದ ಸಂಘಟನೆಗಾಗಿ ಯೋಚಿಸುವ , ಯೋಜಿಸುವವರ ಒಂದು ತಂಡ ಸದಾ ಜಾಗೃತವಾಗಿರುವುದರಿಂದಾಗಿ ಬಿಜೆಪಿಗೆ ಎದುರಾಗುವ ಉಪ ಚುನಾವಣೆಗಳನ್ನು ಎದುರಿಸುವುದು ಒಂದು ಗಂಭೀರ ಸವಾಲೇನೂ ಅಲ್ಲ.ಚುನಾವಣೆಯ ಗೆಲುವೇ ಪ್ರಮುಖ ಗುರಿ ಅಲ್ಲದಿದ್ದರೂ , ಇಂತಹ ಚುನಾವಣೆಗಳ ಮೂಲಕ ಪಕ್ಷದ ಸಂಘಟನೆಗೆ ದೊರೆಯುವ ಅವಕಾಶವನ್ನು ಬಿಜೆಪಿ ಸಮರ್ಥವಾಗಿ ಬಳಸಿಕೊಂಡಿದೆ.ಇದರಿಂದಾಗಿ ಇಂದು ಸಂಘಟನೆಯ ಕಾರ್ಯ ಅಷ್ಟೇನೂ ಪ್ರಭಾವಶಾಲಿಯಾಗಿ ಇಲ್ಲದ ಕಡೆಗಳಲ್ಲೂ ಪಕ್ಷದ ಕಾರ್ಯಕರ್ತರು ತಯಾರಾಗಿದ್ದಾರೆ.

ಉಪ ಚುನಾವಣೆಗಳೆಲ್ಲಾ ಇದೀಗ ಒಂದು ರೀತಿಯಲ್ಲಿ ಮುಗಿದಂತಾಗಿದೆ.ನ್ಯಾಯಾಲಯದಲ್ಲಿರುವ ಕೆಲವು ಪ್ರಕಣಗಳು ಇತ್ಯರ್ಥವಾದರೆ 16 ಕ್ಷೇತ್ರಗಳಿಗೆ ಉಪ ಚುನಾವಣೆಗಳು ನಡೆಯಬಹುದು.ಅದಲ್ಲದೇ ಇದೀಗ ಕರಡಿ ಸಂಗಣ್ಣ ಅವರ ರಾಜೀನಾಮೆಯಿಂದಾಗಿ ತೆರವಾಗಿರುವ ಕೊಪ್ಪಳ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಬಹುದು. ಉಳಿದಂತೆ ಪಕ್ಷದ ಕಾರ್ಯಕರ್ತರು ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನೆಗೆ ಸಂಪೂರ್ಣ ಗಮನಹರಿಸುವುದು ಅಗತ್ಯ. ●

# ಬಿಜೆಪಿ ಶಕ್ತಿಕೇಂದ್ರ ಪ್ರಮುಖರ ಸಮಾವೇಶಗಳು

**"ಸಾವಿರದ ಸಂಭ್ರಮ"** ಸಮಾವೇಶದ ಯಶಸ್ಸು, ಬೂತ್ ಮಟ್ಟದ ಕಾರ್ಯಕರ್ತ ಹಾಗೂ ಕಾರ್ಯದ ದೃಢೀಕರಣದತ್ತ ಸಾಗಲು ನಮ್ಮೆಲ್ಲರಿಗೂ ವಿಶ್ವಾಸ ನೀಡಿದೆ. ನಮ್ಮ ಪಕ್ಷದ ಸದೃಢ ಬೆಳವಣಿಗೆಗೆ **'ಉತ್ತಮ ಸಂಘಟನೆಯೇ ಆಧಾರ'** ಎಂಬ ಭಾವನೆ ನಮ್ಮೆಲ್ಲರಲ್ಲೂ ಮೂಡಿದೆ. ಶಕ್ತಿಕೇಂದ್ರ ಕಾರ್ಯ ಹಾಗೂ ಮತಗಟ್ಟೆ ಕಾರ್ಯ ಮುಂದಿನ ದಿನಗಳಲ್ಲಿ ನಮ್ಮ ಕಾರ್ಯದ ಬಹುದೊಡ್ಡ ಆಯಾಮವಾಗಲಿದೆ.

**ಶಕ್ತಿಕೇಂದ್ರ ಕಾರ್ಯ:** ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು, ನಗರ ಪ್ರದೇಶದಲ್ಲಿ ವಾರ್ಡ್ ಅಥವಾ ವಾರ್ಡ್‌ಗಳ ಸಮೂಹ **ಶಕ್ತಿಕೇಂದ್ರ** ಎಂದು ಕರೆಸಿಕೊಳ್ಳುತ್ತದೆ.

ಶಕ್ತಿಕೇಂದ್ರದಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಒಬ್ಬರು ಮಹಿಳಾ ಪ್ರಮುಖ್, ಜಿಲ್ಲಾ ಪಂಚಾಯತ್ ಸದಸ್ಯ / ಅಭ್ಯರ್ಥಿ, ಶಕ್ತಿಕೇಂದ್ರದ ಪ್ರಭಾರಿ – ಈ ರೀತಿ 5 ಪ್ರಮುಖ ಕಾರ್ಯಕರ್ತರ ತಂಡ ಇರುತ್ತದೆ. ಈ 5 ಕಾರ್ಯಕರ್ತರ ತಂಡ ಶಕ್ತಿಕೇಂದ್ರದ ಎಲ್ಲಾ ಚಟುವಟಿಕೆಗಳ ನಿರ್ವಹಣೆ ಮಾಡಬೇಕು. ಆ ಶಕ್ತಿಕೇಂದ್ರದ ವ್ಯಾಪ್ತಿಯ ಸಭೆಗೆ (2 ತಿಂಗಳಿಗೊಮ್ಮೆ) ಎಲ್ಲಾ ಸ್ಥಾನೀಯ ಸಮಿತಿಯ ಅಧ್ಯಕ್ಷರು ಅಪೇಕ್ಷಿತರು.

ಶಕ್ತಿಕೇಂದ್ರದ ಪ್ರಮುಖರು ಮೂರು ಆಯಾಮಗಳಲ್ಲಿ ಕೆಲಸ ಮಾಡಬೇಕು.

1. **ಕಾರ್ಯಕರ್ತರ ನಿರ್ಮಾಣ, ಸಂಘಟನೆಯ ದೃಢೀಕರಣ, ವಿಸ್ತಾರ:** ಪ್ರತಿ 2 ತಿಂಗಳಿಗೊಮ್ಮೆ ಶಕ್ತಿಕೇಂದ್ರದ ಸಭೆ ನಡೆಯಬೇಕು. ಉತ್ತಮ ಪದ್ದತಿಗಳು ಹಾಗೂ ಕಾರ್ಯಕರ್ತರ ನಿರ್ಮಾಣದ ದೃಷ್ಟಿಯಿಂದ ನಿಯಮಿತ ಸಭೆ, ಅಭ್ಯಾಸವರ್ಗಗಳು, ವಿಚಾರ ಗೋಷ್ಠಿ, ಸಹಲ್, ಸಂಪರ್ಕ, ಪ್ರವಾಸ ಮುಂತಾದ ಎಲ್ಲಾ ಸಂಗತಿಗಳನ್ನು ಯೋಜಿಸಬೇಕು.

**ಶಕ್ತಿಕೇಂದ್ರದ ವ್ಯಾಪ್ತಿಯ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮಾಹಿತಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು.**

ವಿವಿಧ ಕ್ಷೇತ್ರಗಳ, ಸಮುದಾಯಗಳ ಪ್ರಮುಖರು ಪಕ್ಷಕ್ಕೆ ಸೇರ್ಪಡೆಯಾಗುವಂತೆ ಮಾಡಬೇಕು ಹಾಗೂ ಪಕ್ಷದ ಕಾರ್ಯಕರ್ತರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ (ಶಾಲೆ, ಸೇವೆ, ಮಂದಿರ, ಸ್ವ-ಸಹಾಯ ಸಂಘ, ಸಹಕಾರಿ ಇತ್ಯಾದಿ) ತೊಡಗುವಂತೆ ಪ್ರೇರೇಪಿಸಬೇಕು.

**ಸಂಘಟನೆ ಸರ್ವಸ್ಪರ್ಶಿ, ಸರ್ವವ್ಯಾಪಿ ಆಗುವಂತೆ ಗಮನಿಸಬೇಕು.**

2. **ಅಭಿವೃದ್ಧಿಶೀಲ ಚಟುವಟಿಕೆ:** ರಾಜ್ಯದ ವಿವಿಧ ಹಂತಗಳಲ್ಲಿ ನಮ್ಮ ಪ್ರಮುಖರು ಆಡಳಿತದಲ್ಲಿದ್ದಾರೆ. ಅಭಿವೃದ್ಧಿ ಚಟುವಟಿಕೆಗಳು ಸರ್ವಮುಖಿಯಾಗಿ ಹಾಗೂ ಸಮಗ್ರವಾಗಿ ನಡೆಯುವಂತೆ ಗಮನಿಸಬೇಕು.

ಸರ್ಕಾರದ ವಿವಿಧ ಯೋಜನೆಗಳು ಮಧ್ಯವರ್ತಿಗಳ ಹಾವಳಿಯಿಲ್ಲದೆ ಸಾಮಾನ್ಯ ಜನರಿಗೆ ತಲುಪುವಲ್ಲಿ ಪಾತ್ರವಹಿಸಬೇಕು. ಅರ್ಹರು ಹಾಗೂ ಅಶಕ್ತರು ಸೂಕ್ತ ಸೌಲಭ್ಯಗಳನ್ನು ಪಡೆಯುವಲ್ಲಿ ಕಾರ್ಯಕರ್ತರು ಎಲ್ಲಾ ವಿಧದಲ್ಲಿಯೂ ಶ್ರಮಿಸುವಂತಾಗಬೇಕು.

**'ಸಂಘಟನೆಯ ಮೂಲಕ ಜನಹಿತ'** ನಮ್ಮ ಗುರಿ.

3. **ಆಂದೋಲನಾತ್ಮಕ ಚಟುವಟಿಕೆಗಳು:** ಕೇಂದ್ರ ಹಾಗೂ ರಾಜ್ಯದ ವಿವಿಧ ಹಂತಗಳಲ್ಲಿ ಅನ್ಯ ರಾಜಕೀಯ ಪಕ್ಷಗಳ ಆಡಳಿತವಿದೆ. ಅವು ಜನಪರ ನೀತಿಗಳಿಂದ ಹಿಂದೆ ಸರಿದಾಗ, ಅರಾಷ್ಟ್ರೀಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಾಗ, ರಾಜ್ಯ ಸರ್ಕಾರದ ಅಭಿವೃದ್ಧಿಯ ನಡೆಗಳಿಗೆ ತೊಂದರೆ ಮಾಡಿದಾಗ ರಾಷ್ಟ್ರೀಯ ಪಕ್ಷವಾಗಿ ಆಂದೋಲನದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ನಮ್ಮ ಕರ್ತವ್ಯ. ಇದರಲ್ಲಿ ಪಕ್ಷ ಹಿಂದೆ ಬೀಳಬಾರದು.

ಈ ಮೇಲಿನ ಮೂರು ಚಟುವಟಿಕೆಗಳು ಯಶಸ್ವಿಯಾಗಲು ಶಕ್ತಿಕೇಂದ್ರದ ಪದಾಧಿಕಾರಿಗಳ ಪ್ರವಾಸ ಅತ್ಯವಶ್ಯಕ. ಮತಗಟ್ಟೆ ಸಮಿತಿಗಳು ಕ್ರಿಯಾಶೀಲವಾಗಿರಲು ಹಾಗೂ ಜನಪರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತಾಗಲು ಶಕ್ತಿಕೇಂದ್ರದ ಪ್ರಮುಖರು ಸದಾ ಸಕ್ರಿಯರಾಗಿರಬೇಕು.

**ಮತಗಟ್ಟೆ ಕಾರ್ಯ:** ಬಿಜೆಪಿಯ ಆಶಯದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಮೌಲ್ಯಾಧಾರಿತ ರಾಜಕಾರಣಕ್ಕೆ ಜಾಗೃತ ಮತದಾರನೇ ಆಧಾರ. ಇಂದಿನ ವ್ಯವಸ್ಥೆಯಲ್ಲಿ ಮತದಾರನನ್ನು ನಿರಂತರವಾಗಿ ಜಾಗೃತವಾಗಿಡಲು ಯಾವುದೇ ಸಾಂಸ್ಥಿಕ ವ್ಯವಸ್ಥೆಗಳಿಲ್ಲ. ಹೀಗಾಗಿ, ಚುನಾವಣೆಯ ಸಮಯದಲ್ಲಿ ಮತದಾರನನ್ನು ನಿಜವಾದ ಅಂಶಗಳಿಂದ ದೂರ ಸೆಳೆದು ಹಣ, ಪ್ರಲೋಭನೆ, ಜಾತಿ ಇತ್ಯಾದಿಗಳ ಮೂಲಕ ಆತನನ್ನು ದಾರಿತಪ್ಪಿಸುವ ವ್ಯವಸ್ಥೆಗಳು ಬಲವಾಗುತ್ತಿವೆ. ಇವುಗಳ ಪ್ರಭಾವವನ್ನು ದಾಟಿ ಮತದಾರನನ್ನು ಸರಿದಾರಿಯಲ್ಲಿ ಯೋಚಿಸುವಂತೆ ಮಾಡಲು ಸದೃಢ ಮತಗಟ್ಟೆ ಕಾರ್ಯವೇ ಆಧಾರ. ರಾಜಕೀಯ ಕ್ಷೇತ್ರದ ಇಂದಿನ ಅನೇಕ ಸವಾಲುಗಳನ್ನು ಎದುರಿಸಲು ಸಕ್ರಿಯ ಮತಗಟ್ಟೆ ಸಮಿತಿ ಸದಸ್ಯರಿಂದ ಮಾತ್ರ ಸಾಧ್ಯ. ಜಾಗೃತ, ಸ್ವಾವಲಂಬಿ ಮತಗಟ್ಟೆ ಸಮಿತಿ ಸದಸ್ಯರಿಂದ ಮಾತ್ರ ಅರ್ಥಪೂರ್ಣ ಪ್ರಜಾತಾಂತ್ರಿಕ ನಡವಳಿಕೆಗಳನ್ನು

ನಿರೀಕ್ಷಿಸಲು ಸಾಧ್ಯ. ಬಿಜೆಪಿಯ ಮತಗಟ್ಟೆ ಕಾರ್ಯದ ಪ್ರಧಾನ ಆಶಯ ಇದು.

ಮತಗಟ್ಟೆ ಸಮಿತಿ ಬಿಜೆಪಿಯ ಕಟ್ಟಕಡೆಯ ಸಂಘಟನಾತ್ಮಕ ಘಟಕ. ಸಮಿತಿಯಲ್ಲಿ ಒಬ್ಬರು ಸಂಚಾಲಕರು, ಒಬ್ಬರು ಸಹಸಂಚಾಲಕರು, ಒಬ್ಬರು ಮಹಿಳಾ ಪ್ರಮುಖರು, ಒಬ್ಬ ಪ್ರಭಾರಿಗಳ ಜೊತೆಗೆ 8 ರಿಂದ 10 ಜನ ಸದಸ್ಯರಿರಬೇಕು. ಸಮಿತಿ ಆ ಮತಗಟ್ಟೆಯ ಎಲ್ಲಾ ಭೌಗೋಳಿಕ ಪ್ರದೇಶಗಳನ್ನು, ಸಮುದಾಯಗಳನ್ನು, ವೃತ್ತಿವರ್ಗಗಳನ್ನು ಪ್ರತಿನಿಧಿಸಬೇಕು.

ಮತಗಟ್ಟೆ ಸಮಿತಿ ಪ್ರತೀ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು. ಕೆಳಗಿನ ಪಂಚ ಸೂತ್ರಗಳ ಆಧಾರದ ಮೇಲೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

**ಜನ ಸಂಪರ್ಕ, ಜನ ಸಂವಾದ, ಜನ ಸಂಸ್ಕಾರ,**
**ಜನ ಜಾಗರಣ ಹಾಗೂ ಜನ ಹಿತ**
ಇವು ಮತಗಟ್ಟೆ ಕಾರ್ಯದ ಪಂಚ ಸೂತ್ರಗಳು.

**ಜನ ಸಂಪರ್ಕ:** ಮತಗಟ್ಟೆ ಸಮಿತಿ ಸದಸ್ಯರು ಮನೆಗಳನ್ನು ಹಂಚಿಕೊಂಡು, ಆರು ತಿಂಗಳಿಗೊಮ್ಮೆ ಮತಗಟ್ಟೆ ಪ್ರದೇಶದ ಎಲ್ಲ ಮನೆಗಳನ್ನು ತಲುಪಬೇಕು. ಪ್ರತೀ ಮತದಾರನನ್ನು ಭೇಟಿಮಾಡಬೇಕು. ಪ್ರತೀ 20–25 ಮನೆಗಳಿಗೆ ಒಬ್ಬ ಕಾರ್ಯಕರ್ತನಂತೆ ಹಂಚಿಕೊಳ್ಳಬೇಕು.

**ಜನ ಸಂವಾದ:** ಮತದಾರ ಹಾಗೂ ಮತದಾರನ ಮನೆ ಸಂಪರ್ಕದ ಸಂದರ್ಭದಲ್ಲಿ ದೇಶ ಹಾಗೂ ರಾಜ್ಯದ ವರ್ತಮಾನ ಪರಿಸ್ಥಿತಿ, ಬಿಜೆಪಿಯ ನಿಲುವುಗಳು, ಆಡಳಿತದಲ್ಲಿರುವ ವ್ಯವಸ್ಥೆಗಳಲ್ಲಿ ಬಿಜೆಪಿಯ ಜನಪರ ಹೆಜ್ಜೆಗಳು, ಆ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳು– ಇವುಗಳ ಕುರಿತು ಚರ್ಚೆ ನಡೆಸಬೇಕು.

**ಜನ ಸಂಸ್ಕಾರ:** ಇಂದು ರಾಜಕೀಯ ಕ್ಷೇತ್ರದ ಕುರಿತು ಜನರ ಭಾವನೆ ಒಳ್ಳೆಯದೇನಿಲ್ಲ. ಬಿಜೆಪಿಯ ಮತಗಟ್ಟೆ ಸಮಿತಿ 'ಬಿಜೆಪಿ ವಿಭಿನ್ನ ರಾಜಕೀಯ ಪಕ್ಷ' ಎಂಬುದನ್ನು ಸಾಧಿಸಿ ತೋರಿಸಬೇಕು. ಗ್ರಾಮೋತ್ಸವ, ಭಜನಾ ಚಟುವಟಿಕೆ, ಸ್ವಾವಲಂಬನದ (ಸ್ವ–ಸಹಾಯ ಸಂಘ, ಗೃಹ ಉದ್ಯೋಗ ಇತ್ಯಾದಿ) ಚಟುವಟಿಕೆಗಳು ಮುಂತಾದವುಗಳ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಬಿಜೆಪಿ ಮತಗಟ್ಟೆ ಸಮಿತಿ ಚಿಂತಿಸಬೇಕು. ಸ್ಥಾನೀಯ ಜನಜೀವನವನ್ನು ಇನ್ನಷ್ಟು ಉತ್ತಮಗೊಳಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳ ಕುರಿತು ಚರ್ಚಿಸಬೇಕು. ಜಲ ಸಂರಕ್ಷಣೆ, ಗೋ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಷೇಧ, ಸಾವಯವ–ಸಹಜ ಕೃಷಿ ಅಳವಡಿಕೆ, ಸಾಕ್ಷರತೆ ಮುಂತಾದವುಗಳ ಕುರಿತು ಆಲೋಚಿಸಬೇಕು.

**ಜನ ಜಾಗರಣ:** ಮತಗಟ್ಟೆ ಸಮಿತಿ ಪ್ರದೇಶದ ಅರಾಷ್ಟ್ರೀಯ ಚಟುವಟಿಕೆಗಳು, ಸ್ಥಾಪಿತ ಹಿತಾಸಕ್ತಿಗಳ ಜನವಿರೋಧಿ ನೀತಿಗಳು, ಗ್ರಾಮ–ಮತಗಟ್ಟೆ ಪ್ರದೇಶದ ಸಮಾಜದ ಹಿತಕ್ಕೆ ವಿರುದ್ಧವಾದ ಆಡಳಿತ ನೀತಿಗಳು, ಚುನಾವಣೆ ಸಂದರ್ಭದಲ್ಲಿ ನಡೆಯುವ ಪ್ರಜಾಪ್ರಭುತ್ವ ವಿರೋಧಿ ನಡವಳಿಕೆಗಳು ಇವೆಲ್ಲದರ ವಿರುದ್ಧ ಮತಗಟ್ಟೆ ಸಮಿತಿ ಮತದಾರರನ್ನು ಜಾಗೃತಗೊಳಿಸಬೇಕು. ಪ್ರತೀ ಗ್ರಾಮವೂ ರಾಮ ರಾಜ್ಯವಾಗುವಂತೆ ಎಲ್ಲರೂ ಒಟ್ಟು ಸೇರಿ ಪ್ರಯತ್ನಿಸಬೇಕು ಎಂಬ ಮನೋಭಾವವನ್ನು ಅಲ್ಲಿ ಎಲ್ಲರಲ್ಲಿ ಮೂಡಿಸಬೇಕು.

**ಜನ ಹಿತ:** ಬಿಜೆಪಿಯ, ಬಿಜೆಪಿಯ ಮತಗಟ್ಟೆ ಸಮಿತಿಯ, ಬಿಜೆಪಿಯ ಜನಪ್ರತಿನಿಧಿಗಳ ಅಂತಿಮ ಆಶಯವೇ ಇದು. ಸರ್ವಜನ ಹಿತಾಯ, ಸರ್ವಜನ ಸುಖಾಯ (Welfare State) ನಮ್ಮ ಗುರಿ. ಸಂಪರ್ಕ, ಸಂವಾದ, ಸಂಸ್ಕಾರ, ಜಾಗರಣದ ಮುಖಾಂತರ ಜನ ಹಿತ ಸಾಧನೆಯಾಗಬೇಕು. ನಮ್ಮೆಲ್ಲ ಚಟುವಟಿಕೆಗಳಿಂದಾಗಿ ಸುತ್ತಲಿನ ಸಮಾಜ ಆರೋಗ್ಯಕರವಾಗಿ ರೂಪಿತವಾಗಬೇಕು.

**ಮತಗಟ್ಟೆ ಕಾರ್ಯದ ಮುಖಾಂತರ ಮತಗಟ್ಟೆಯ ಮತಗಳು ಬಿಜೆಪಿ ಮತಗಳಾಗಿ ಪರಿವರ್ತನೆಯಾಗಬೇಕು. ಬಿಜೆಪಿಗೆ ಗೆಲುವು ಸಿಗಬೇಕು. ಆ ಗೆಲುವು ಸಮೃದ್ಧ ಸಮಾಜ, ಅಭಿವೃದ್ಧಿಶೀಲ ರಾಜ್ಯದ ನಿರ್ಮಾಣಕ್ಕೆ ದಾರಿಯಾಗಬೇಕು.**

**ಮುಂದಿನ ಕಾರ್ಯಕ್ರಮಗಳು**

1. **ನಮ್ಮ ನಡಿಗೆ ಶಕ್ತಿಕೇಂದ್ರ ಕಡೆಗೆ:** ಏಪ್ರಿಲ್ ತಿಂಗಳಲ್ಲಿ ಎಲ್ಲ ಶಕ್ತಿಕೇಂದ್ರಗಳಲ್ಲಿ ಮತಗಟ್ಟೆ ಸಮಿತಿಯ ನಾಲ್ವರು ಪ್ರಮುಖರು (ಸಂಚಾಲಕರು, ಸಹಸಂಚಾಲಕರು, ಮಹಿಳಾ ಪ್ರಮುಖ್, ಪ್ರಭಾರಿ), ಶಕ್ತಿಕೇಂದ್ರದ ವ್ಯಾಪ್ತಿಯ ಜಿಲ್ಲಾ, ತಾಲ್ಲೂಕು, ಗ್ರಾ.ಪಂ. ಸದಸ್ಯರು, ಅಭ್ಯರ್ಥಿಗಳು, ಎಲ್ಲಾ ಸಹಕಾರಿ ಸಂಸ್ಥೆಗಳ ನಿರ್ದೇಶಕರು ಅಪೇಕ್ಷಿತರಿರುವ (**ಸುಮಾರು 150 ಸಂಖ್ಯೆ**) ಸಭೆಯೊಂದು ನಡೆಯಬೇಕು. ಸಭೆಯಲ್ಲಿ ಉದ್ಘಾಟನೆ, ಸಮಾರೋಪಗಳೊಡನೆ ಮುಂದಿನ ಚಟುವಟಿಕೆಗಳು ಹಾಗೂ ಆ ಶಕ್ತಿಕೇಂದ್ರದಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿಕಾರ್ಯಗಳ ಕುರಿತು ಚರ್ಚೆ ನಡೆಯಬೇಕು.

   ಮೇ ತಿಂಗಳಲ್ಲಿ ಕೈಗೊಳ್ಳಬೇಕಾದ ಮನೆ–ಮನೆ ಸಂಪರ್ಕ ಕಾರ್ಯದ ಕುರಿತು ಸವಿವರವಾದ ಚರ್ಚೆ ನಡೆಯಬೇಕು. ಜವಾಬ್ದಾರಿಗಳ ಹಂಚಿಕೆಯಾಗಬೇಕು. ಸಾಹಿತ್ಯ ವಿತರಣೆಯಾಗಬೇಕು.

2. **ಮನೆ–ಮನೆಗೆ ಬಿಜೆಪಿ ಕಾರ್ಯಕರ್ತ:** ಮೇ ತಿಂಗಳಲ್ಲಿ ಮತಗಟ್ಟೆ ಸಮಿತಿ ಸದಸ್ಯರು ತಮ್ಮ ವ್ಯಾಪ್ತಿಯ ಎಲ್ಲ ಮನೆಗಳನ್ನು ಸಂಪರ್ಕಿಸಬೇಕು. ಆ ಸಂದರ್ಭದಲ್ಲಿ ಎರಡು ಚಟುವಟಿಕೆಗಳನ್ನು ನಡೆಸಬೇಕು.

   ಬಿಜೆಪಿಯ ಇತಿಹಾಸ – ಬೆಳವಣಿಗೆ, ರಾಜ್ಯ ಸರ್ಕಾರದ ಅಭಿವೃದ್ಧಿಯ ಹೆಜ್ಜೆಗಳು, ಕೇಂದ್ರ ಸರ್ಕಾರದ

ದುರಾಡಳಿತದ ಕುರಿತು ವಿವರಗಳಿರುವ ಕರಪತ್ರವನ್ನು ವಿತರಿಸಿ ಮನೆಮಂದಿಯೊಡನೆ ಸಂವಾದ ನಡೆಸಬೇಕು.

ಮತಗಟ್ಟೆ ಸಮಿತಿ ಸದಸ್ಯರು ಮತಗಟ್ಟೆ ವ್ಯಾಪ್ತಿಯ ಮಾಹಿತಿಗಳು, ಆಗಿರುವ ಅಭಿವೃದ್ಧಿ ಕಾರ್ಯಗಳು, ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆಗಳ ಕುರಿತಾದ ಸರ್ವೇಕ್ಷಣಾ ಪತ್ರಕವನ್ನು ತುಂಬಿಸಿ ರಾಜ್ಯಕ್ಕೆ ಕಳುಹಿಸಿಕೊಡಬೇಕು.

3. **ಮತಗಟ್ಟೆ ಸಮಿತಿ ಸದಸ್ಯರ ಸಮಾವೇಶ:** ಜೂನ್ ತಿಂಗಳಲ್ಲಿ ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಕ್ಷೇತ್ರ ಮಟ್ಟದ ಮತಗಟ್ಟೆ ಸಮಿತಿ ಸದಸ್ಯರ ಸಮಾವೇಶ ನಡೆಸಬೇಕು (ಮತಗಟ್ಟೆಗೆ ಹತ್ತು ಸದಸ್ಯರಂತೆ ಸರಾಸರಿ 2000 ಕಾರ್ಯಕರ್ತರು). ಉದ್ಘಾಟನೆ, ಸಮಾರೋಪಗಳೊಡನೆ ಮನೆ-ಮನೆ ಸಂಪರ್ಕದ ಅನುಭವ, ಮತಗಟ್ಟೆ ಕಾರ್ಯದ ಪ್ರಾಮುಖ್ಯತೆ, ರಾಜ್ಯ ಸರ್ಕಾರದ ಸಾಧನೆಗಳು, ಕೇಂದ್ರದ ದುರಾಡಳಿತ – ಭ್ರಷ್ಟ ನೀತಿಗಳ ಕುರಿತು ಕಾರ್ಯಕರ್ತರಿಗೆ ಮಾಹಿತಿ ನೀಡಬೇಕು.

ಸಮಾವೇಶ, ಭೋಜನದ ನಂತರ ಮೆರವಣಿಗೆಯಲ್ಲಿ ತೆರಳಿ ಸಾರ್ವಜನಿಕ ಸಭೆ ನಡೆಸಬೇಕು. ಕೇಂದ್ರ ಸರ್ಕಾರದ ಭ್ರಷ್ಟಾಚಾರ, ಕಪ್ಪು ಹಣ, ಬೆಲೆ ಏರಿಕೆ ವಿರುದ್ಧ ಈ ಸಾರ್ವಜನಿಕ ಸಭೆ ನಡೆಯಬೇಕು.

ಕೇಂದ್ರ ಸರ್ಕಾರದ ವಿರುದ್ಧದ ಈ ಸಭೆಯ ಹಿನ್ನೆಲೆಯಲ್ಲಿ ವೈವಿಧ್ಯಮಯವಾದ ಪ್ರತಿಭಟನಾ ಕಾರ್ಯಕ್ರಮಗಳನ್ನು ಪೂರ್ವಭಾವಿಯಾಗಿ ಹಮ್ಮಿಕೊಳ್ಳಬೇಕು. ಉದಾಹರಣೆಗೆ ವ್ಯಂಗ್ಯಚಿತ್ರ ರಚನಾ ಸ್ಪರ್ಧೆ, ಕ್ಯಾಂಡಲ್ ಲೈಟ್ ಪ್ರದರ್ಶನ, ಸೈಕಲ್ ರ‍್ಯಾಲಿ, ಪಾದಯಾತ್ರೆ, ಅಣಕು ಬೀದಿ ನಾಟಕಗಳು, ಗೋಡೆ ಬರಹ, ಬ್ಯಾನರ್‌ನಲ್ಲಿ ಸಹಿ ಸಂಗ್ರಹ ಇತ್ಯಾದಿ. ವಿವಿಧ ಮೋರ್ಚಾಗಳು ಪ್ರತ್ಯೇಕ ಪೂರ್ವಭಾವಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

4. **ಏಪ್ರಿಲ್ 6, ಬಿಜೆಪಿಯ ಸ್ಥಾಪನಾ ದಿವಸ:** ಅಂದು ಶಕ್ತಿಕೇಂದ್ರದ ಯಾವುದಾದರೊಂದು ಮತಗಟ್ಟೆಯಲ್ಲಿ ಬಿಜೆಪಿಯ ಧ್ವಜಾರೋಹಣ ಮಾಡಿ, ಆ ಪ್ರದೇಶದಲ್ಲಿ ಮೆರವಣಿಗೆ ಮಾಡಿ ಸಭೆ ನಡೆಸಬೇಕು.

5. **ಏಪ್ರಿಲ್ 14, ಶ್ರದ್ಧೇಯ ಡಾ. ಅಂಬೇಡ್ಕರ್ ಜಯಂತಿ:** ಡಾ. ಅಂಬೇಡ್ಕರ್ ಕುರಿತು ಭಾಷಣ, ಎಸ್.ಸಿ. ಕಾಲೋನಿಗಳಲ್ಲಿ ಸೇವಾ ಕಾರ್ಯ, ಶಾಸಕರಿರುವೆಡೆ ಸರ್ಕಾರಿ ಸೌಲಭ್ಯಗಳ ಹಂಚಿಕೆ, ರಕ್ತದಾನ ಶಿಬಿರ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

6. ರಾಜ್ಯದ 23 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಅಭ್ಯಾಸವರ್ಗಗಳು ನಡೆದಿವೆ. ಉಳಿದ ಜಿಲ್ಲೆಗಳಲ್ಲಿ ಜಿಲ್ಲಾ ಅಭ್ಯಾಸವರ್ಗಗಳು, ಜಿಲ್ಲಾ ಅಭ್ಯಾಸವರ್ಗಗಳು ಮುಗಿದಿರುವಲ್ಲಿ ಮಂಡಲ ಅಭ್ಯಾಸವರ್ಗಗಳನ್ನು ಜುಲೈ ತಿಂಗಳೊಳಗೆ ಮುಗಿಸಬೇಕು. ರಾಜ್ಯದ ಮೋರ್ಚಾ ಅಭ್ಯಾಸವರ್ಗಗಳು ಏಪ್ರಿಲ್, ಮೇ ತಿಂಗಳಲ್ಲಿ ನಡೆಯಲಿದೆ.

ಮೇಲಿನ ಕಾರ್ಯಕ್ರಮಗಳು ಯಶಸ್ವಿಯಾಗಲು ಸೂಕ್ತ ಪೂರ್ವ ತಯಾರಿ ಹಾಗೂ ಜವಾಬ್ದಾರಿಗಳ ಸುಯೋಗ್ಯ ಹಂಚಿಕೆ ಅತ್ಯವಶ್ಯಕ. ಮಂಡಲದ ಪ್ರಮುಖರು, ಶಕ್ತಿಕೇಂದ್ರದ ಪದಾಧಿಕಾರಿಗಳು ಈ ನಿಟ್ಟಿನಲ್ಲಿ ವ್ಯಾಪಕ ಪ್ರಯತ್ನ ನಡೆಸಬೇಕು.

## ವಿಭಾಗೀಯ ಸಮಾವೇಶಗಳು

**ಕಳೆದ ಫೆಬ್ರುವರಿ 20ರಂದು ನಡೆದ ರಾಜ್ಯ ಬಿಜೆಪಿ ಸಮಾವೇಶ ಸಂಘಟನಾ ಕಾರ್ಯಕ್ಕೆ ಹೊಸ ಆಯಾಮವನ್ನೇ ನೀಡಿದೆ. ಸಮಾವೇಶದ ಅಭೂತಪೂರ್ವ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪಕ್ಷದ ಕಾರ್ಯಕರ್ತರು ಹೊಸ ಹುಮ್ಮಸ್ಸಿನಿಂದ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ವಿಶೇಷ.**

ಸಮಾವೇಶದ ಅನುವರ್ತೀ ಕಾರ್ಯವೆಂಬಂತೆ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಶಕ್ತಿಕೇಂದ್ರ ಕಾರ್ಯ, ಮತಗಟ್ಟೆ ಕಾರ್ಯ ಮುಂಬರುವ ಪಕ್ಷದ ಸಂಘಟನಾತ್ಮಕ ಕಾರ್ಯಕ್ರಮಗಳಾದ ನಮ್ಮ ನಡಿಗೆ ಶಕ್ತಿಕೇಂದ್ರದ ಕಡೆಗೆ, ಮನೆ-ಮನೆಗೆ ಬಿಜೆಪಿ ಕಾರ್ಯಕರ್ತ, ಮತಗಟ್ಟೆ ಸದಸ್ಯರ ಸಮಾವೇಶ ಮುಂತಾದವುಗಳನ್ನು ಸವಿಸ್ತಾರವಾಗಿ ವಿಶದ ಪಡಿಸುವ ಸಲುವಾಗಿ ವಿಭಾಗೀಯ ಮಟ್ಟದಲ್ಲಿ ಶಕ್ತಿಕೇಂದ್ರ ಪ್ರಮುಖರ ಸಮಾವೇಶವನ್ನು ಮಾರ್ಚ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಭೌಗೋಳಿಕ ದೃಷ್ಟಿಯಿಂದ ಅನುಕೂಲವಾಗಲೆಂದು ಕೆಲವೆಡೆ ಈ ಸಮಾವೇಶ ಜಿಲ್ಲಾ ಮಟ್ಟದಲ್ಲಿ ಅಥವಾ ಎರಡು-ಮೂರು ಜಿಲ್ಲೆಗಳು ಸೇರಿಯೂ ನಡೆದಿದೆ. ಒಂದು ದಿನದ ಸಮಾವೇಶದಲ್ಲಿ ಮುಖ್ಯವಾಗಿ ಉದ್ಘಾಟನೆ ಹಾಗೂ ಸಮಾರೋಪಗಳ ನಡುವೆ ಎರಡು ಅವಧಿಗಳು ನಡೆದಿವೆ. ವೈಚಾರಿಕ ಅವಧಿ ಹಾಗೂ ಸಂಘಟನಾತ್ಮಕ ಅವಧಿ ಎಂಬ ಈ ಎರಡೂ ಗೋಷ್ಠಿಗಳಲ್ಲಿ ಪ್ರಮುಖವಾಗಿ ಪಕ್ಷದ ತತ್ವ, ಸಿದ್ಧಾಂತಗಳ ವಿವರಣೆಯ ಜೊತೆಗೆ ಸಂಘಟನಾತ್ಮಕ ಕಾರ್ಯಕ್ರಮಗಳ ವಿವರಗಳನ್ನು ನೀಡಲಾಯಿತು. ಸಮಾರೋಪಕ್ಕೆ ಮೊದಲು ಪ್ರಶ್ನೋತ್ತರದ ಅವಧಿಯೂ ಸೇರಿತ್ತು. ರಾಜ್ಯದ ವಿವಿಧ ಸ್ಥಳಗಳಲ್ಲಿ ನಡೆದ ಸಮಾವೇಶದ ವಿವರ ಈ ಕೆಳಗಿನಂತಿದೆ.

**ಹಾವೇರಿ:** ಹಾವೇರಿ, ಗದಗ, ಹುಬ್ಬಳ್ಳಿ-ಧಾರವಾಡ ಮಹಾನಗರ ಹಾಗೂ ಧಾರವಾಡ ಗ್ರಾಮಾಂತರ ಜಿಲ್ಲಾ ಶಕ್ತಿಕೇಂದ್ರದ ಪ್ರಮುಖರ ಸಮಾವೇಶ ಹಾವೇರಿಯಲ್ಲಿ ಆಯೋಜಿಸಲ್ಪಟ್ಟಿತ್ತು.

ಒಟ್ಟು ಉಪಸ್ಥಿತಿ–756. ಸಮಾವೇಶದ ಉದ್ಘಾಟನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ನೆರವೇರಿಸಿದರು. ವೈಚಾರಿಕ ಅವಧಿಯನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ಭಾನುಪ್ರಕಾಶ್ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ಲಿಂಗರಾಜ ಪಾಟೀಲರವರು ನಡೆಸಿಕೊಟ್ಟರು. ಪ್ರಶ್ನೋತ್ತರ ಅವಧಿ ಹಾಗೂ ಸಮಾರೋಪವನ್ನು ಸಚಿವ ಶ್ರೀ ಜಗದೀಶ್ ಶೆಟ್ಟರ್‌ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಸಿ.ಸಿ. ಪಾಟೀಲ, ಶ್ರೀಮತಿ ಸೀಮಾ ಮಸೂತಿ ಹಾಗೂ ಶ್ರೀ ಕಳಕಪ್ಪ ಬಂಡಿಯವರು ಉಪಸ್ಥಿತರಿದ್ದರು.

**ಬೆಳಗಾವಿ:** ಬೆಳಗಾವಿ ನಗರ, ಬೆಳಗಾವಿ ಗ್ರಾಮಾಂತರ ಹಾಗೂ ಚಿಕ್ಕೋಡಿ ಜಿಲ್ಲಾ ಶಕ್ತಿಕೇಂದ್ರದ ಪ್ರಮುಖರ ಸಮಾವೇಶ ಬೆಳಗಾವಿಯಲ್ಲಿ ನಡೆಯಿತು. ಉಪಸ್ಥಿತಿ ಒಟ್ಟು–920. ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪನವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀ ಗೋ. ಮಧುಸೂದನ್‌ರವರು ವೈಚಾರಿಕ ಅವಧಿಯನ್ನು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ನಿರ್ಮಲ್ ಕುಮಾರ್ ಸುರಾನಾರವರು ಸಂಘಟನಾತ್ಮಕ ಅವಧಿಯನ್ನು ನಡೆಸಿಕೊಟ್ಟರು. ಪ್ರಶ್ನೋತ್ತರ ಹಾಗೂ ಸಮಾರೋಪ ಸಮಾರಂಭದಲ್ಲಿ ಸಚಿವರ ಶ್ರೀ ಉಮೇಶ ಕತ್ತಿ, ಸಂಸದ ಶ್ರೀ ಸುರೇಶ್ ಅಂಗಡಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

**ಬೆಂಗಳೂರು ನಗರ:** ಬೆಂಗಳೂರು ನಗರ ಜಿಲ್ಲಾ ಸಮಾವೇಶವು ಬೆಂಗಳೂರಿನ ನಾಗವಾರದಲ್ಲಿ ನಡೆಯಿತು. ಸಚಿವ ಶ್ರೀ ಸುರೇಶಕುಮಾರ್‌ರವರು ಸಮಾವೇಶದ ಉದ್ಘಾಟನೆ ನಡೆಸಿದರು. ಶ್ರೀ ಸಚ್ಚಿದಾನಂದಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸದ ಶ್ರೀ ಪ್ರಹ್ಲಾದ ಜೋಷಿಯವರು ವೈಚಾರಿಕ ಅವಧಿ ಹಾಗೂ ಶ್ರೀ ಎಂ.ಬಿ. ನಂದೀಶ್‌ರವರು ಸಂಘಟನಾತ್ಮಕ ಅವಧಿಯನ್ನು ನಡೆಸಿಕೊಟ್ಟರು. ಶ್ರೀ ಕೆ.ಎಸ್. ಈಶ್ವರಪ್ಪನವರು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದರು. ಒಟ್ಟು ಉಪಸ್ಥಿತಿ–754.

**ಚಿತ್ರದುರ್ಗ:** ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲಾ ಶಕ್ತಿಕೇಂದ್ರದ ಪ್ರಮುಖರ ಸಮಾವೇಶ ಚಿತ್ರದುರ್ಗದಲ್ಲಿ ನೆರವೇರಿತು. ಒಟ್ಟು ಉಪಸ್ಥಿತಿ–345. ಸಮಾವೇಶದ ಉದ್ಘಾಟನೆಯನ್ನು ಸಚಿವ ಶ್ರೀ ಎ.ನಾರಾಯಣಸ್ವಾಮಿಯವರು ನೆರವೇರಿಸಿದರು. ವೈಚಾರಿಕ ಅವಧಿಯನ್ನು ಶ್ರೀ ಗಿರೀಶ್ ಪಟೇಲ್ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ಎಂ.ಬಿ. ನಂದೀಶ್ ನಡೆಸಿಕೊಟ್ಟರು. ಡಾ॥ ಶಿವಯೋಗಿಸ್ವಾಮಿಯವರು ಪ್ರಶ್ನೋತ್ತರ ಹಾಗೂ ಸಮಾರೋಪ ಸಮಾರಂಭ ಅವಧಿಯ ಮುಖ್ಯ ಅತಿಥಿಗಳಾಗಿದ್ದರು.

**ಹೆಚ್.ಕ್ರಾಸ್:** ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಶಕ್ತಕೇಂದ್ರ ಪ್ರಮುಖರ ಸಮಾವೇಶ ಹೆಚ್.ಕ್ರಾಸ್‌ನಲ್ಲಿ ನಡೆಯಿತು. ಉಪಸ್ಥಿತಿ–240. ಸಚಿವ ಶ್ರೀ ವಿಜಯ್‌ಶಂಕರ್‌ರವರು ಸಮಾವೇಶವನ್ನು ಉದ್ಘಾಟಿಸಿದರು. ವೈಚಾರಿಕ ಅವಧಿಯನ್ನು ಶ್ರೀ ಗೋಪಿನಾಥ ರೆಡ್ಡಿ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ನಿರ್ಮಲ್‌ಕುಮಾರ್ ಸುರಾನಾರವರು ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ಶಾಸಕ ಶ್ರೀ ವಿಜಯ್‌ಕುಮಾರ್‌ರವರು ಮುಖ್ಯ ಅತಿಥಿಗಳಾಗಿದ್ದರು.

**ಉಡುಪಿ:** ಉಡುಪಿ ಬಳಿಯ ಉದ್ಯಾವರದಲ್ಲಿ ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲಾ ಶಕ್ತಿಕೇಂದ್ರದ ಪ್ರಮುಖರ ಸಮಾವೇಶ ನಡೆಯಿತು. ಉಪಸ್ಥಿತಿ–398. ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪನವರು ನೆರವೇರಿಸಿದರು. ವೈಚಾರಿಕ ಅವಧಿಯನ್ನು ಶ್ರೀ ಎಂ.ಬಿ. ಭಾನುಪ್ರಕಾಶ್ ಹಾಗೂ ಸಂಘಟನಾತ್ಮಕ ಅವಧಿಯನ್ನು ಸಂಸದ ಶ್ರೀ ನಳೀನ್‌ಕುಮಾರ್ ಕಟೀಲ್‌ರವರು ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ಸಂಸದ ಶ್ರೀ ಸದಾನಂದಗೌಡ, ಡಾ॥ ವಿ.ಎಸ್. ಆಚಾರ್ಯರವರು ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಯೋಗೀಶ್ ಭಟ್, ಶ್ರೀ ರುಕ್ಮಯ್ಯ ಪೂಜಾರ್, ಶ್ರೀ ಪ್ರತಾಪಚಂದ್ರ ನಾಯಕ, ಶ್ರೀ ಸುನೀಲ್‌ಕುಮಾರ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಬೆಂಗಳೂರು ಗ್ರಾಮಾಂತರ:** ಬೆಂಗಳೂರು ಗ್ರಾಮಾಂತರ ಜಿಲ್ಲಾ ಶಕ್ತಿಕೇಂದ್ರ ಪ್ರಮುಖರ ಸಮಾವೇಶ ಬೆಂಗಳೂರಿನಲ್ಲಿ ನಡೆಯಿತು. ಉಪಸ್ಥಿತಿ–140. ಶ್ರೀ ಹನುಮಂತರಾಯಪ್ಪನವರು ಸಮಾವೇಶವನ್ನು ಉದ್ಘಾಟಿಸಿದರು. ವೈಚಾರಿಕ ಅವಧಿಯನ್ನು ಶ್ರೀ ಸಚ್ಚಿದಾನಂದಮೂರ್ತಿ ಹಾಗೂ ಸಂಘಟನಾತ್ಮಕ ಅವಧಿಯನ್ನು ಶಾಸಕ ಶ್ರೀ ವಿಜಯ್‌ಕುಮಾರ್‌ರವರು ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ಶ್ರೀ ಗೋಪಿನಾಥ ರೆಡ್ಡಿಯವರು ಮುಖ್ಯ ಅತಿಥಿಗಳಾಗಿದ್ದರು.

**ಬೆಂಗಳೂರು ಮಹಾನಗರ:** ಬೆಂಗಳೂರು ಮಹಾನಗರ ಶಕ್ತಿಕೇಂದ್ರ ಪ್ರಮುಖರ ಸಮಾವೇಶವನ್ನು ಸಚಿವ ಶ್ರೀ ನಾರಾಯಣಸ್ವಾಮಿಯವರು ಉದ್ಘಾಟಿಸಿದರು. ಸಚಿವ ಶ್ರೀ ಆರ್. ಅಶೋಕ್‌ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವೈಚಾರಿಕ ಅವಧಿಯನ್ನು ಶ್ರೀ ಎಂ.ಬಿ. ಭಾನುಪ್ರಕಾಶ್ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ಸಿ.ಟಿ. ರವಿಯವರು ನಡೆಸಿಕೊಟ್ಟರು. ಸಂಜೆಯ ಸಮಾರೋಪ ಸಮಾರಂಭದಲ್ಲಿ ಸಂಸದ ಶ್ರೀ ಪ್ರಹ್ಲಾದ ಜೋಷಿಯವರು ಮುಖ್ಯ ಅತಿಥಿಗಳಾಗಿದ್ದರು. ಒಟ್ಟು ಉಪಸ್ಥಿತಿ–618.

**ಶಿರಸಿ:** ಉತ್ತರಕನ್ನಡ ಜಿಲ್ಲಾ ಶಕ್ತಿಕೇಂದ್ರ ಪ್ರಮುಖರ ಸಭೆ ಶಿರಸಿಯಲ್ಲಿ ನೆರವೇರಿತು. ಒಟ್ಟು ಉಪಸ್ಥಿತಿ–166. ಸಮಾವೇಶವನ್ನು ಎಸ್.ಸಿ. ಮೋರ್ಚಾ ಅಧ್ಯಕ್ಷ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಉದ್ಘಾಟಿಸಿ ಮಾತನಾಡಿದರು. ಸಂಸದ ಶ್ರೀ ಅನಂತ್‌ಕುಮಾರ್ ಹೆಗಡೆಯವರು ವೈಚಾರಿಕ ಅವಧಿಯನ್ನು ಹಾಗೂ ಶ್ರೀ ಗಿರೀಶ್ ಪಟೇಲ್‌ರವರು ಸಂಘಟನಾತ್ಮಕ ಅವಧಿಯನ್ನು ನಡೆಸಿಕೊಟ್ಟರು. ಪ್ರಶ್ನೋತ್ತರ ಅವಧಿ ಹಾಗೂ ಸಮಾರೋಪ ಸಮಾರಂಭದಲ್ಲಿ ಶ್ರೀ ವಿ. ಸುನೀಲ್‌ಕುಮಾರ್‌ರವರು ಮುಖ್ಯ ಅತಿಥಿಗಳಾಗಿದ್ದರು.

**ತುಮಕೂರು:** ತುಮಕೂರು ಜಿಲ್ಲಾ ಸಮಾವೇಶವನ್ನು ರಾಜ್ಯ

ಬಿಜೆಪಿ ಉಪಾಧ್ಯಕ್ಷ ಶ್ರೀ ಅಶ್ವಥ್‌ನಾರಾಯಣ್‌ರವರು ಉದ್ಘಾಟಿಸಿದರು. ಸಮಾವೇಶದ ವೈಚಾರಿಕ ಅವಧಿಯನ್ನು ಶ್ರೀ ನಂದೀಶ್‌ರವರು ಹಾಗೂ ಸಂಘಟನಾತ್ಮಕ ಅವಧಿಯನ್ನು ಜಿಲ್ಲಾಧ್ಯಕ್ಷ ಶ್ರೀ ಶಿವಪ್ರಸಾದ್‌ರವರು ನಡೆಸಿಕೊಟ್ಟರು. ಪ್ರಶ್ನೋತ್ತರ ಅವಧಿ ಹಾಗೂ ಸಮಾರೋಪ ಸಮಾರಂಭದಲ್ಲಿ ಶ್ರೀ ನಿರ್ಮಲ್‌ಕುಮಾರ್ ಸುರಾನಾರವರು ಅತಿಥಿಗಳಾಗಿದ್ದರು. ಒಟ್ಟು ಉಪಸ್ಥಿತಿ–190.

**ಹಾಸನ:** ಹಾಸನ ಜಿಲ್ಲಾ ಶಕ್ತಿಕೇಂದ್ರ ಪ್ರಮುಖರ ಸಭೆ ಹಾಸನದಲ್ಲಿ ನಡೆಯಿತು. ಸಮಾವೇಶದಲ್ಲಿ ಒಟ್ಟು ಉಪಸ್ಥಿತಿ–205. ಸಮಾವೇಶದ ಉದ್ಘಾಟನೆಯನ್ನು ಶ್ರೀ ಗೋ. ಮಧುಸೂದನ್‌ರವರು ನೆರವೇರಿಸಿದರು. ಜೊತೆಗೆ ವೈಚಾರಿಕ ಅವಧಿಯನ್ನು ಅವರೇ ನಡೆಸಿಕೊಟ್ಟರು. ಸಂಘಟನಾತ್ಮಕ ಅವಧಿಯನ್ನು ನಡೆಸಿಕೊಟ್ಟ ರಾಜ್ಯಸಭಾ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರೇ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

**ಗುಲ್ಬರ್ಗ:** ಗುಲ್ಬರ್ಗಾ ನಗರ, ಗುಲ್ಬರ್ಗಾ ಗ್ರಾಮಾಂತರ ಹಾಗೂ ಯಾದಗಿರಿ ಜಿಲ್ಲೆಗಳ ಶಕ್ತಿಕೇಂದ್ರ ಪ್ರಮುಖರ ಸಮಾವೇಶ ಗುಲ್ಬರ್ಗದಲ್ಲಿ ನಡೆಯಿತು. ಒಟ್ಟು ಉಪಸ್ಥಿತಿ–340. ಶ್ರೀ ರಘುನಾಥರಾವ್ ಮಲ್ಕಾಪುರೆಯವರು ಸಮಾವೇಶವನ್ನು ಉದ್ಘಾಟಿಸಿದರು. ಶ್ರೀ ಅನಿಲ್ ಹೋಲ್‌ಸಮುದ್ರಕರ್‌ರವರು ವೈಚಾರಿಕ ಅವಧಿಯನ್ನು ನಡೆಸಿಕೊಟ್ಟರು. ಶ್ರೀ ಮಲ್ಕಾಪುರೆಯವರು ಸಂಘಟನಾತ್ಮಕ ಅವಧಿಯನ್ನು ನೆರವೇರಿಸಿದರು. ಶ್ರೀ ಅಮರ್‌ನಾಥ್ ಪಾಟೀಲ್‌ರವರು ಪಕ್ಷದ ಮುಂಬರುವ ಚಟುವಟಿಕೆಗಳ ರೂಪುರೇಷೆಗಳನ್ನು ವಿವರಿಸಿದರು. ಪ್ರಶ್ನೋತ್ತರ ಅವಧಿ ಹಾಗೂ ಸಮಾರೋಪ ಸಮಾರಂಭದಲ್ಲಿ ಶ್ರೀ ಶಶಿಲ್ ನಮೋಶಿಯವರು ಮುಖ್ಯ ಅತಿಥಿಗಳಾಗಿದ್ದರು.

**ಬಿಜಾಪುರ:** ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಶಕ್ತಿಕೇಂದ್ರದ ಪ್ರಮುಖರ ಸಭೆ ಕೋಲ್ಲಾರ್‌ದಲ್ಲಿ ನಡೆಯಿತು. ಒಟ್ಟು ಉಪಸ್ಥಿತಿ–366. ಶ್ರೀ ಶಶಿಕಾಂತ್ ಕುಲ್ಕರ್ಣಿಯವರು ಸಮಾವೇಶವನ್ನು ಉದ್ಘಾಟಿಸಿದರು. ಜನಸಂಘದ ಕಾಲದಿಂದಲೂ ಪಕ್ಷದ ಹಿರಿಯ ಕಾರ್ಯಕರ್ತರಾಗಿರುವ ಶ್ರೀ ರುದ್ರಪ್ಪ ಹುಲ್ಯಾಳರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವೈಚಾರಿಕ ಅವಧಿಯನ್ನು ಶ್ರೀ ಗೋ. ಮಧುಸೂದನ್‌ರವರು ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ನಿರ್ಮಲ್‌ಕುಮಾರ್ ಸುರಾನಾರವರು ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ಶ್ರೀ ಸಿದ್ದು ಸವದಿಯವರು ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಅರುಣ್ ಶಹಾಪೂರ ಹಾಗೂ ಶ್ರೀ ವಿಠ್ಠಲ ಕಟಕದೊಂಡರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಶಿವಮೊಗ್ಗ:** ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲಾ ಶಕ್ತಿಕೇಂದ್ರ ಪ್ರಮುಖರ ಸಮಾವೇಶ ಶಿವಮೊಗ್ಗದಲ್ಲಿ ಆಯೋಜಿಸಲ್ಪಟ್ಟಿತು. ಒಟ್ಟು ಉಪಸ್ಥಿತಿ–360. ಸಮಾವೇಶದ ಉದ್ಘಾಟನೆಯನ್ನು ಸಚಿವ ಶ್ರೀ ವಿಜಯಶಂಕರ್‌ರವರು ನೆರವೇರಿಸಿದರು. ವೈಚಾರಿಕ ಅವಧಿಯನ್ನು ಶ್ರೀ ಗೋಪಿನಾಥ ರೆಡ್ಡಿ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ಭಾನುಪ್ರಕಾಶ್‌ರವರು ನಡೆಸಿಕೊಟ್ಟರು. ಪ್ರಶ್ನೋತ್ತರ ಅವಧಿ ಹಾಗೂ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕೆ.ಎಸ್. ಈಶ್ವರಪ್ಪನವರು ಉಪಸ್ಥಿತರಿದ್ದರು.

**ಬಳ್ಳಾರಿ:** ಬಳ್ಳಾರಿ ಜಿಲ್ಲಾ ಶಕ್ತಿಕೇಂದ್ರ ಪ್ರಮುಖರ ಸಮಾವೇಶದ ಉದ್ಘಾಟನೆಯನ್ನು ಸಚಿವ ಶ್ರೀ ಜನಾರ್ಧನ ರೆಡ್ಡಿಯವರು ನೆರವೇರಿಸಿದರು.

ವೈಚಾರಿಕ ಅವಧಿಯನ್ನು ಶ್ರೀ ಅಮರನಾಥ ಪಾಟೀಲ ಹಾಗೂ ಸಂಘಟನಾತ್ಮಕ ಅವಧಿಯನ್ನು ಶ್ರೀ ಮೃತ್ಯುಂಜಯ ಜಿನಗರವರು ತೆಗೆದುಕೊಂಡರು. ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಶ್ರೀ ವಿರೂಪಾಕ್ಷಗೌಡರು ಉಪಸ್ಥಿತರಿದ್ದರು.

**ಸಮಾವೇಶಗಳಲ್ಲಿ ಆಯಾ ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು, ಸಂಸದರು, ಶಾಸಕರು, ಮೋರ್ಚಾ ಪದಾಧಿಕಾರಿಗಳು, ಪಕ್ಷದ ಪ್ರಮುಖರು ಪಾಲ್ಗೊಂಡಿದ್ದರು.**

**ವೈಚಾರಿಕವಾಗಿ ಸೈದ್ಧಾಂತಿಕವಾಗಿ ಕಾರ್ಯಕರ್ತರು ಸಶಕ್ತರಾದಾಗಲೇ ಸಂಘಟನೆ ತನ್ನ ಗಟ್ಟಿತನ ಉಳಿಸಿಕೊಳ್ಳಲು ಸಾಧ್ಯ. ವ್ಯಕ್ತಿ ನಿರ್ಮಾಣದ ಮೂಲಕ ಸಂಘಟನೆಯ ಬೇರುಗಳನ್ನು ಬಲಪಡಿಸುವತ್ತ ಈ ಸಮಾವೇಶಗಳು ಯಶಸ್ವಿ ಹೆಜ್ಜೆ ಹಾಕಲಿವೆ. ಬರಲಿರುವ ದಿನಗಳಲ್ಲಿ ಸಂಘಟನಾತ್ಮಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆ ಹಾಗೂ ಕಾರ್ಯಕರ್ತರ ಸೈದ್ಧಾಂತಿಕ ಗಟ್ಟಿತನವೇ ಪಕ್ಷದ ದಿಕ್ಕು–ದೆಸೆಗಳನ್ನು ನಿರ್ಣಯಿಸಲಿವೆ.** ●

## ಯುವ ಸಂಘರ್ಷ ಆಂದೋಲನ
## ಬಿಜೆಪಿ ಯುವ ಮೋರ್ಚಾ–ರಾಜ್ಯವ್ಯಾಪಿ ಪಾದಯಾತ್ರೆ

ಸಂಪೂರ್ಣ ಭ್ರಷ್ಟಾಚಾರದಲ್ಲಿ ಮುಳುಗಿರುವ ಕೇಂದ್ರದ ಯುಪಿಎ ಸರ್ಕಾರದ ವಿರುದ್ಧ ರಾಜ್ಯ ಬಿಜೆಪಿ ಯುವ ಮೋರ್ಚಾ ಏಪ್ರಿಲ್ 1 ರಿಂದ ಎಲ್ಲಾ ತಾಲ್ಲೂಕುಗಳಲ್ಲಿ ಪಾದಯಾತ್ರೆಯನ್ನು ಹಮ್ಮಿಕೊಂಡಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಸುರಕ್ಷಾ ವಿರೋಧಿ ನೀತಿಗಳು, 1,76,000 ಕೋಟಿ ರೂ.ಗಳ 2ಜಿ ಸ್ಪೆಕ್ಟ್ರಂ ಹಗರಣ, 85,000 ಕೋಟಿ ರೂ.ಗಳ ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣ 2 ಲಕ್ಷ ಕೋಟಿ ರೂ.ಗಳ ಎಸ್‌ಬ್ಯಾಂಡ್ ಹಗರಣ, ಆದರ್ಶ ಅಪಾರ್ಟ್‌ಮೆಂಟ್ ಹಗರಣ, 65 ಲಕ್ಷ 52 ಸಾವಿರ ಕೋಟಿ ರೂ. ಕಪ್ಪು ಹಣ ಮುಂತಾದ ಅವ್ಯವಹಾರಗಳ ವಿರುದ್ಧ ಯುವ ಮೋರ್ಚಾ ತನ್ನ ಪ್ರತಿಭಟನೆಯನ್ನು ತೀವ್ರಗೊಳಿಸಿದೆ.

ರಾಜ್ಯದುದ್ದಕ್ಕೂ ಜನತೆಗೆ ಕೇಂದ್ರದ ಭ್ರಷ್ಟಾಚಾರದ ಬಗ್ಗೆ ತಿಳಿಸಿ ಹೇಳುತ್ತಾ ಪ್ರಮುಖವಾಗಿ ಯುವಕರನ್ನು ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಸೇರಿಸಿಕೊಳ್ಳುವತ್ತ ಈ ಪಾದಯಾತ್ರೆ ಸಾಗಲಿದೆ.

# ಡಾ|| ಅಂಬೇಡ್ಕರವರ ಸುಧಾರಣಾವಾದಿ ದೃಷ್ಟಿಕೋನ

ಮೂಲ ಹಿಂದಿ: ಶ್ರೀ ಶ್ರೀನಿವಾಸ ಆರ್ಯ



**ದಲಿತೋದ್ಧಾರ:** ಡಾ|| ಬಾಬಾ ಸಾಹೇಬ ಅಂಬೇಡ್ಕರವರು ಅಜ್ಞಾನದ ಪ್ರಪಾತದಲ್ಲಿ ಬಿದ್ದ ಅಸ್ಪೃಶ್ಯರಲ್ಲಿ ತಮ್ಮ ವಿದ್ವತ್ತಿನ ಮೂಲಕ ಜಾಗೃತಿಯನ್ನುಂಟು ಮಾಡಿದ ಮಹಾನಾಯಕ. ತಮ್ಮ ಉತ್ಥಾನವನ್ನು ತಾವೇ ಸ್ವತಃ ಮಾಡಿಕೊಳ್ಳುವಂತೆ ಅವರು ದಲಿತರಿಗೆ ಕರೆ ನೀಡಿದರು. ಇನ್ನೊಬ್ಬರ ದಾಸ್ಯದಲ್ಲಿ ಬಾಳುವುದು ಧರ್ಮವಲ್ಲ. ಅದು ಅಧರ್ಮ. ಪ್ರಾಣಿಯಂತೆ ಬಾಳುವುದು ಮಾನವ ಧರ್ಮವೆನಿಸದು. ಜಗತ್ತಿನಲ್ಲಿ ಎಲ್ಲ ಮಾನವರೂ ಸಮಾನರು ಎಲ್ಲರಿಗೂ ಉತ್ತಮ ಆಹಾರ, ಒಳ್ಳೆಯ ಬಟ್ಟೆ ಹಾಗೂ ಶ್ರೇಷ್ಠ ಜ್ಞಾನವನ್ನು ಗಳಿಸುವ ಸಮಾನ ಅಧಿಕಾರವಿದೆ. ಅಧಿಕಾರವೆನ್ನುವುದು ಭಿಕ್ಷೆ ಬೇಡುವುದರಿಂದ ಸಿಗಲಾರದು. ಅದನ್ನು ಸಂಘರ್ಷದ ಮೂಲಕವೇ ಗಳಿಸಬೇಕು. ಸೀದಾ ಮನಸ್ಸಿನ ಮಗ ತಾಯಿಯಿಂದ ಏನನ್ನಾದರೂ ಕೇಳಿದರೂ ಅವಳು ಅವನನ್ನು ಗದರಿಸಿ ನಿರ್ಲಕ್ಷಿಸಬಹುದು. ಆದರೆ ಚಾಲಾಕಿ ಮಗ ಹೇಗಾದರೂ ಮಾಡಿ ತಾಯಿಯಿಂದ ತನ್ನ ಬೇಡಿಕೆ ಪೂರೈಸಿಕೊಂಡೇ ತೀರುತ್ತಾನೆ.

ಪಾಂಡವರು ತಮ್ಮ ಹಕ್ಕಿನ ಭೂಮಿಗಾಗಿ ಕೌರವರೊಡನೆ ಎಷ್ಟೇ ಕೇಳಿಕೊಂಡರೂ ಸೂಜಿ ಮೊನೆಯಷ್ಟು ಭೂಮಿಯನ್ನು ಪಡೆಯಲಾಗಲಿಲ್ಲ. ಸಂಘರ್ಷದ ಮೂಲಕವೇ ಅವರಿಗೆ ರಾಜ್ಯ ಪ್ರಾಪ್ತಿಯಾಯಿತು. ಇದೇ ರೀತಿ ದಲಿತರು ತಮ್ಮ ಅಧಿಕಾರ ಪ್ರಾಪ್ತಿ ಹೊಂದಬೇಕೆಂದರೆ ಮೊದಲು ಮಾಂಸಾಹಾರ ತ್ಯಜಿಸಿ ಶಾಕಾಹಾರಿಗಳಾಗಬೇಕು. ಮದ್ಯಸೇವನೆ ಬಿಡಬೇಕು. ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು. ತಮ್ಮ ಅಧಿಕಾರಕ್ಕೋಸ್ಕರ ಹೋರಾಡಬೇಕು ಎಂದು ಅವರು ಹೇಳುತ್ತಿದ್ದರು.

**ಧಾರ್ಮಿಕ ಸುಧಾರಣೆ:** ಅಸ್ಪೃಶ್ಯತೆಯನ್ನು ಸಮಾಜದಿಂದ ದೂರಗೊಳಿಸಿ ಧರ್ಮವನ್ನು ಉಳಿಸಬೇಕಾಗಿದೆ ಎಂದು ಡಾ|| ಅಂಬೇಡ್ಕರ್ ಅಭಿಪ್ರಾಯ ಪಟ್ಟಿದ್ದರು. ಅಸ್ಪೃಶ್ಯತೆಯ ಆಚರಣೆಯಿಂದ ಹಿಂದೂ ಧರ್ಮಕ್ಕೆ ಅಪಾರ ಹಾನಿ ಉಂಟಾಗುವುದೆಂದೂ ಅವರು ಹೇಳುತ್ತಿದ್ದರು. ದಲಿತರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಜೊತೆಗೊಯ್ದು ಧಾರ್ಮಿಕ ಸುಧಾರಣೆ ತರುವ ಅವಶ್ಯಕತೆಯ ಬಗ್ಗೆ ಒತ್ತಿ ಹೇಳುತ್ತಿದ್ದರು.

**ಸಮಾಜ ಸುಧಾರಣೆ:** ಡಾ|| ಅಂಬೇಡ್ಕರ್‌ರವರು ಓರ್ವ ಸಮಾಜ ಸುಧಾರಕರಾಗಿದ್ದರು. ಅವರು ರಾಜಕಾರಣಕ್ಕಿಂತ ಹೆಚ್ಚಾಗಿ ಸಮಾಜ ಸುಧಾರಣೆಯ ಕಾರ್ಯದಲ್ಲೇ ಹೆಚ್ಚು ಸಕ್ರಿಯರಾಗಿದ್ದರು. ರಾಜನೀತಿಗಿಂತ ಸಮಾಜ ಸುಧಾರಣೆ ಹೆಚ್ಚು ಮಹತ್ವದ ಕಾರ್ಯವೆಂದು ಅವರು ನಂಬಿದ್ದರು. ರಾಜಕೀಯ ಕಾರ್ಯಕರ್ತರು ಪ್ರಾಥಮಿಕವಾಗಿ ಸಮಾಜವನ್ನು ಸಬಲಗೊಳಿಸುವ, ಸಮಾಜದಲ್ಲಿ ಸದ್ಭಾವನೆಯನ್ನು ಬೆಳೆಸುವ ಹಾಗೂ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಬಗ್ಗೆ ಚಿಂತಿಸಬೇಕೆಂದು ಅವರು ಹೇಳುತ್ತಿದ್ದರು.

1953 ಅವರು ದಲಿತ ಕಾರ್ಯಕರ್ತರಿಗೆ ಕರೆ ನೀಡಿ "ಚುನಾವಣಾ ರಾಜಕೀಯದಲ್ಲಿ ತೊಡಗುವವರು ಚುನಾವಣೆ ನಂತರ ನಿಷ್ಕ್ರಿಯರಾಗಿಬಿಡುತ್ತಾರೆ. ಸೋತವರು ಮನೆಯಲ್ಲಿ ತಣ್ಣಗೆ ಕುಳಿತುಬಿಡುತ್ತಾರೆ. ಗೆದ್ದವರು ವಿಧಾನಸಭೆಗೋ–ಲೋಕಸಭೆಗೋ ಹೋಗಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನೇ ಮರೆತುಬಿಡುತ್ತಾರೆ. ಜನರ ಸಮಸ್ಯೆಯ ಬಗ್ಗೆ ಚಿಂತಿಸಲು ಯಾರಿಗೂ ಸಮಯವೇ ಇರುವುದಿಲ್ಲ. ಇದಕ್ಕೆ ಬದಲಾಗಿ ಪ್ರತಿಯೋರ್ವ ಕಾರ್ಯಕರ್ತನು ಜನತೆಯ ಸಮಸ್ಯೆಯ ಬಗ್ಗೆ ಸದಾ ಜಾಗರೂಕನಾಗಿರಬೇಕು" ಎಂದು ಅವರು ಕರೆ ನೀಡಿದರು.

**ಮಾನವತಾವಾದಿ ದೃಷ್ಠಿಕೋನ:** ಡಾ|| ಅಂಬೇಡ್ಕರವರು ಪ್ರತಿಯೊಬ್ಬರ ಏಳಿಗೆಯ ಬಗ್ಗೆ ಯೋಚಿಸುತ್ತಿದ್ದರು. ಹಿಂದೂ ಧರ್ಮ ತಂದ ಮಾನವತಾವಾದಿ ಧೋರಣೆಯಿಂದ ವಿಶ್ವವಿಖ್ಯಾತಿ ಹೊಂದಿದೆ ಎಂದು ಅವರು ನಂಬಿದ್ದರು. ಗೀತೆಯ ಉಪದೇಶ ಬ್ರಾಹ್ಮಣ ಅಥವಾ ದಲಿತರಲ್ಲಿ ಭೇದವೆಣಿಸದೆ ಪ್ರೇರಣೆ ನೀಡುತ್ತದೆ. ಇಷ್ಟೊಂದು ಉತ್ತಮ ಸಿದ್ಧಾಂತ ಹೊಂದಿದ್ದರೂ ದಲಿತರ ಬಗ್ಗೆ ಅಸಹಕಾರ ಧೋರಣೆ ಏಕೆ ಎಂದು ಅವರು ಕೇಳುತ್ತಿದ್ದರು. ಪ್ರತಿಯೊಂದು ಜೀವಿಯಲ್ಲೂ ಹಿಂದೂಧರ್ಮ ಈಶ್ವರನನ್ನು ಕಾಣುತ್ತಿರುವಾಗ ಮನುಷ್ಯ ಮನುಷ್ಯರಲ್ಲಿ ಭೇದವೇಕೆ ಎಂಬುದು ಅವರ ಪ್ರಶ್ನೆಯಾಗಿತ್ತು.

**ಪ್ರೇರಣೆಯ ಸ್ರೋತ:** ಹಿಂದೂಗಳು ತಮ್ಮ ಧರ್ಮ–ಪರಂಪರೆಗಳನ್ನು ಚಿರಸ್ಥಾಯಿಯಾಗಿ ಉಳಿಸಿಕೊಳ್ಳಬೇಕಾದಲ್ಲಿ ಹಿಂದೂ ಧರ್ಮಗ್ರಂಥಗಳ ಅಧ್ಯಯನ ಕೈಗೊಳ್ಳಬೇಕು. ಧರ್ಮಗ್ರಂಥಗಳಲ್ಲಿರುವ ಸಾಮಾಜಿಕ ಸುವ್ಯವಸ್ಥೆಯ ವಿಷಯಗಳನ್ನು ಮನನ ಮಾಡಿಕೊಳ್ಳಬೇಕು. ಗ್ರಂಥಗಳಲ್ಲಿರುವ ಅನವಶ್ಯಕ ವಿಷಯಗಳನ್ನು ಬಿಟ್ಟು ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಸಂಪೂರ್ಣ ಸೃಷ್ಟಿಯ ತತ್ವಜ್ಞಾನ ಅಡಗಿದೆ ಎಂದು ಅವರು ಹೇಳುತ್ತಿದ್ದರು.

**ಅಸ್ಪೃಶ್ಯರಿಗೆ ಸಮಾನತೆ ನೀಡುವ ಬಗ್ಗೆ ಪ್ರಯತ್ನ:** ಅಸ್ಪೃಶ್ಯರಿಗೆ ಸಮಾಜದಲ್ಲಿ ಸಮಾನ ಸ್ಥಾನ ಸಿಗಲು ಡಾ|| ಅಂಬೇಡ್ಕರ್‌ರವರು ತೀವ್ರ ಪ್ರಯಾಸ ನಡೆಸಿದರು. 1929ರಲ್ಲಿ ರತ್ನಾಗಿರಿಯ ಚಿಪಲೂಣ ಎಂಬಲ್ಲಿ ಅವರು ತಮ್ಮ ಸಹಯೋಗಿಗಳೊಂದಿಗೆ ಅಸ್ಪೃಶ್ಯರಿಗೆ ಯಜ್ಞೋಪವೀತಧಾರಣೆ ನಡೆಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ದೇವರಾಯ ನಾಯಕರವರ ಸಂಪೂರ್ಣ ಸಹಯೋಗ ಅವರ ಜೊತೆಗಿತ್ತು.

**ದಲಿತ ಬಸ್ತಿಗಳಲ್ಲಿ ಸುಧಾರಣೆ:** ದಲಿತ ಬಸ್ತಿಗಳ ಸುಧಾರಣೆಗಾಗಿ ಅವರು "ಸಮಾಜ ಸಮತಾ ಸಂಘ"ವನ್ನು ಸ್ಥಾಪಿಸಿದರು. ಈ

ಸಂಘದ ಮೂಲಕ ದಲಿತರಿಗೆ ಪಾನನಿರೋಧದ ಬಗ್ಗೆ ಒತ್ತು ನೀಡಲಾಯಿತು. ಮಹಿಳೆಯರಿಗೆ ಕರೆನೀಡಿ ಅವರು ತಮ್ಮ ತಮ್ಮ ಪತಿಯರಿಗೆ ಕುಡಿಯದಂತೆ ಒತ್ತಡ ಹೇರಲು ಸೂಚಿಸಿದರು. ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಿದರು. ಶಿಕ್ಷಣ ಪಡೆದರೆ ತಾನಾಗಿಯೇ ಸುಧಾರಣೆ ತರಲು ಸಾಧ್ಯ ಎಂದು ಅವರು ನಂಬಿದ್ದರು.

**ಪಾನ ನಿರೋಧದ ಕ್ರಮ:** ತಮ್ಮ ಸಂಸ್ಥೆಯ ಕಾರ್ಯಕರ್ತರೊಂದಿಗೆ ಸೇರಿ ಅವರು ಬಸ್ತಿಗಳಲ್ಲಿ ಶರಾಬು ಬಳಸದಂತೆ ಕ್ರಮಹೇರಿದರು. ತಮ್ಮ ಪತಿ ಅಥವಾ ಮಗ ಕುಡಿದು ಮನೆಗೆ ಬಂದರೆ ಊಟ ನೀಡದಂತೆ ಅವರು ಮಹಿಳೆಯರಿಗೆ ಕರೆ ನೀಡಿದರು. ಇಂಥ ನಿಷೇಧದಿಂದ ಕುಡಿತವನ್ನು ದೂರಮಾಡಲು ಸಾಧ್ಯವೆಂದು ಅವರು ತಿಳಿಪಡಿಸಿದರು.

**ನೀವು ನಿಮ್ಮ ಪದ್ಧತಿಯನ್ನು ಬದಲಿಸಿಕೊಳ್ಳಿ:** ಎಲ್ಲ ದೋಷವನ್ನು ಸವರ್ಣಿಯವರ ಮೇಲೆ ಹೇರದಂತೆ ಡಾ॥ ಅಂಬೇಡ್ಕರ್‌ರವರು ದಲಿತರಿಗೆ ಹೇಳುತ್ತಿದ್ದರು. ಸವರ್ಣೀಯರು ಬಡವರಾದರೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುತ್ತಾರೆ. ತಮ್ಮ ಮಕ್ಕಳಿಗೆ ಶಿಕ್ಷಣ ನೀಡುತ್ತಾರೆ. ಅವರು ಮಕ್ಕಳು ಸುಶಿಕ್ಷಿತರಾಗಿ ಉತ್ತಮ ಸ್ಥಾನ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಅದೇ ರೀತಿ ನಿಮ್ಮ ಮಕ್ಕಳೂ ಶಿಕ್ಷಣ ಪಡೆದು ನೌಕರಿ ಹಿಡಿಯುವಂತಾಗಬೇಕೆಂದು ಅವರು ಪ್ರೇರೇಪಿಸುತ್ತಿದ್ದರು.

ವಿವಿಧ ಭಾಗಗಳಲ್ಲಿ ಸಂಚರಿಸಿ ಅವರು ಮಹಿಳೆಯರಿಗೆ ಅವರು ತಮ್ಮ ರೀತಿ ರಿವಾಜುಗಳನ್ನು ಬದಲಿಸಿಕೊಳ್ಳಲು ಸಲಹೆ ನೀಡಿದರು. ಸ್ವಚ್ಛ ವಸ್ತ್ರ ಉಡುವಂತೆ ಹೇಳುತ್ತಿದ್ದರು. ತಮ್ಮ ಮನೆಗಳನ್ನು ಸ್ವಚ್ಛವಾಗಿಡಿ. ಕಷ್ಟ ಸಹಿಸಿಯಾದರೂ ಮಕ್ಕಳಿಗೆ ಶಿಕ್ಷಣ ನೀಡಿ. ನಿಮ್ಮ ಮಕ್ಕಳು ಸುಶಿಕ್ಷಿತವಾದರೆ ಮಾತ್ರ ಸಮಾಜ ಸುಧಾರಣೆ ಸಾಧ್ಯ ಎಂದು ಅವರು ತಿಳಿ ಹೇಳುತ್ತಿದ್ದರು.

**ಕಠೋರ ತಪಸ್ಸು:** ಡಾ॥ ಅಂಬೇಡ್ಕರ್‌ರವರು ಸಮಾಜದಲ್ಲಿ ಸಮಾನತೆಯ ಸಂಜೀವಿನಿಯನ್ನು ನೀಡುವ ಹನುಮಂತನಂತೆ ಪರಾಕ್ರಮಿ ಪುರುಷರಾಗಿದ್ದರು. ಯಾವ ಮನುಷ್ಯನಲ್ಲಿ ಆತ್ಮ ಶಕ್ತಿ ಜಾಗೃತವಾಗಿರುತ್ತದೆಯೋ ಆತ ತನ್ನ ಮಾರ್ಗದಿಂದ ತನ್ನ ಉದ್ದೇಶದಿಂದ ವಿಚಲಿತಗೊಳ್ಳುವುದಿಲ್ಲ. ಆತ ಭಗವಂತನಲ್ಲಿ ನಿಷ್ಠೆ ಹೊಂದಿರುವಂತೆಯೇ ಉತ್ತಮ ಕಾರ್ಯಗಳನ್ನು ಮಾಡುತ್ತಾ ಸಾಗುತ್ತಾನೆ. ಪಾಪ ಕಾರ್ಯಗಳಲ್ಲಿ ಎಂದೂ ಮಗ್ನನಾಗುವುದಿಲ್ಲ. ಮಾನವ ಜನಾಂಗದ ಕಲ್ಯಾಣವನ್ನೇ ತನ್ನ ಗುರಿಯನ್ನಾಗಿರಿಸಿಕೊಳ್ಳುತ್ತಾನೆ. ಡಾ॥ ಭೀಮರಾವ್ ಅಂಬೇಡ್ಕರ್‌ರವರು ವಿಶ್ವದ ಇಂಥ ಮಹಾನ್ ವ್ಯಕ್ತಿಗಳ ಸಾಲಿಗೆ ಸೇರುತ್ತಾರೆ. ●

### ಡಾ॥ ಅಂಬೇಡ್ಕರ್ ಜಯಂತಿ

ಏಪ್ರಿಲ್ 14ರಂದು ಡಾ॥ ಅಂಬೇಡ್ಕರ್ ಜಯಂತಿ ನಿಮಿತ್ತ ಬಿಜೆಪಿಯ ಎಲ್ಲಾ ಸ್ತರಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಸೇವಾ ಬಸ್ತಿಗಳಲ್ಲಿ ಸೂಕ್ತ ರೀತಿಯಲ್ಲಿ ಡಾ॥ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಆಚರಿಸಿ ವರದಿಗಳನ್ನು ಫೋಟೋ ಸಹಿತ ರಾಜ್ಯ ಕಾರ್ಯಾಲಯಕ್ಕೆ ಕಳುಹಿಸುವುದು.

# ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳ ಸಭೆ

ದಿನಾಂಕ: 24-03-2011ರಂದು ಬೆಂಗಳೂರಿನ ಶ್ರೀ ಭಾವೂರಾವ್ ದೇಶಪಾಂಡೆ ಭವನದಲ್ಲಿ ರಾಜ್ಯ ಮಹಿಳಾ ಮೋರ್ಚಾ ಪದಾಧಿಕಾರಿಗಳ ಸಭೆಯು ರಾಜ್ಯ ಅಧ್ಯಕ್ಷರಾದ ಶ್ರೀಮತಿ ರೀನಾ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ, ರಾಷ್ಟ್ರೀಯ ಮಹಿಳಾ ಮೋರ್ಚಾ ಉಪಾಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ ಪ್ರಕಾಶ್, ರಾಷ್ಟ್ರೀಯ ಸ.ಸಂ. ಕಾರ್ಯದರ್ಶಿಯವರಾದ ಶ್ರೀ ಸತೀಶ್‌ಜಿ ಮತ್ತು ರಾಜ್ಯ ಉಪಾಧ್ಯಕ್ಷರಾದ ಶ್ರೀ ನಿರ್ಮಲ್ ಕುಮಾರ ಸುರಾನರವರ ಉಪಸ್ಥಿತಿಯಲ್ಲಿ ನಡೆಯಿತು.

ಸಭೆಯಲ್ಲಿ ವಿಭಾಗಶಃ ಹಾಗೂ ಜಿಲ್ಲಾಶಃ ವರದಿಯ ನಂತರ 2 ಕಾರ್ಯಕ್ರಮಗಳನ್ನು ರಾಜ್ಯ ಮಹಿಳಾ ಮೋರ್ಚಾ ವತಿಯಿಂದ ನಡೆಸಲು ನಿಶ್ಚಯಿಸಲಾಯಿತು.

1. ಕೇಂದ್ರ ಸರ್ಕಾರದ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ ಪಾದಯಾತ್ರೆ ಮತ್ತು ಪ್ರತಿಭಟನೆಯನ್ನು ಮಂಡಲ, ಜಿಲ್ಲಾ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಡೆಸಲು ದಿನಾಂಕಗಳನ್ನು ನಿಶ್ಚಯಿಸಲಾಯಿತು. ದಿನಾಂಕ 30-04-2011ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ಮತ್ತು ಪ್ರತಿಭಟನೆ.
2. ರಾಜ್ಯ ಮಹಿಳಾ ಮೋರ್ಚಾದ ಪ್ರಶಿಕ್ಷಣ ವರ್ಗವನ್ನು ಮೇ 1, 2 ಹಾಗೂ 3ರಂದು ಬೆಂಗಳೂರಿನ ಪ್ರಶಾಂತಿ ಕುಟೀರದಲ್ಲಿ ನಡೆಸುವಂತೆ ನಿಶ್ಚಯಿಸಲಾಯಿತು.

ಸಭೆಯಲ್ಲಿ ಪಾಲ್ಗೊಂಡು ಮಾರ್ಗದರ್ಶನ ನೀಡಿದ ರಾಷ್ಟ್ರೀಯ ಸ.ಸಂ. ಪ್ರಧಾನ ಕಾರ್ಯದರ್ಶಿ ಮಾನ್ಯಶ್ರೀ ಸತೀಶ್‌ಜೀರವರು ಪ್ರಭಾರಿಗಳ ಕೆಲಸವೇನೆಂಬುದನ್ನು ತಿಳಿಸಿದರು.

ಅವುಗಳಲ್ಲಿ ಪ್ರಮುಖವಾಗಿ:

1. ಸಂಘಟನೆ.
2. ತಾಳ್ಮೆಯಿಂದ ಪದಾಧಿಕಾರಿಗಳು ಹೇಳುವುದನ್ನು ಕೇಳುವುದು.
3. ಹೇಳುವುದನ್ನು ಅರ್ಥೈಸಿಕೊಳ್ಳುವುದು.
4. ಸಮಸ್ಯೆಯನ್ನು ನಿವಾರಿಸುವುದು.
5. ಕಾರ್ಯಕರ್ತರಲ್ಲಿ ಸಮರ್ಪಣಾ ಭಾವ ಮೂಡಿಸಲು ಪ್ರಯತ್ನಿಸುವುದು.
6. ಪಕ್ಷದಲ್ಲಿ ಬದ್ಧತೆ ಇರುವುದು.
7. ಸ್ಥಳೀಯ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಎಲ್ಲವೂ ನಮ್ಮದು ಎನ್ನುವ ಭಾವನೆ ಮೂಡಿಸಬೇಕು.

ಹೀಗೆ ಅವರು ಅನೇಕ ಸೂಕ್ಷ್ಮ ವಿಷಯಗಳನ್ನು ತಿಳಿಹೇಳಿದರು.

## ಆರೆಸ್ಸೆಸ್ ಅ.ಭಾ.ಪ್ರ.ಸಭಾ ಉದ್ಘಾಟಿಸಿದ ಶ್ರೀ ಮೋಹನ್‌ಜೀ ಭಾಗ್ವತ್

# ಸಂಘ ಕಾರ್ಯಕ್ಕೆ ಚುರುಕು

ರಾಷ್ಟ್ರದ ಆಂತರಿಕ ಸವಾಲುಗಳು ಹಾಗೂ ವರ್ತಮಾನದ ಆತಂಕಗಳನ್ನು ಎದುರಿಸಲು ಸಂಘಕಾರ್ಯದ ವೇಗ ಮತ್ತು ಶಕ್ತಿಯನ್ನು ಹೆಚ್ಚಿಸಬೇಕಾಗಿದೆ. ಅಲ್ಲದೆ ಈಗಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ಕೂಡಾ ಇಂದು ಅವಲೋಕಿಸಬೇಕಾಗಿದೆ. ರಾಷ್ಟ್ರವನ್ನು ವಿಷವೃತ್ತವಾಗಿ ಕಾಡುತ್ತಿರುವ ಭ್ರಷ್ಟಾಚಾರವನ್ನು ವ್ಯಕ್ತಿ, ಆಯ್ದ ಗುಂಪುಗಳಿಗೆ ಸೀಮಿತಗೊಳಿಸದೆ ಇಡಿ ರಾಷ್ಟ್ರ ಒಟ್ಟಾಗಿ ನಿವಾರಿಸಲು ಸಂಕಲ್ಪ ತೊಡಬೇಕಾದ ಅಗತ್ಯವನ್ನು ಸಂಘ ಮನಗಂಡಿದ್ದು, ಭ್ರಷ್ಟಾಚಾರದ ವಿಚಾರವನ್ನು ಸಭೆಯಲ್ಲಿ ಗಂಭೀರವಾಗಿ ಚರ್ಚಿಸಲಾಗುವುದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಡಾ.ಮನಮೋಹನ ವೈದ್ಯ ತಿಳಿಸಿದ್ದಾರೆ. ಪುತ್ತೂರಿನ ವಿವೇಕಾನಂದ ಕಾಲೇಜಿನ ಆವರಣದಲ್ಲಿ ಆರಂಭಗೊಂಡ ಆರ್‌ಎಸ್‌ಎಸ್ ಅಖಿಲ ಭಾರತ ಪ್ರತಿನಿಧಿಸಭಾದ ಮೊದಲ ದಿನ ಸುದ್ದಿಗೋಷ್ಠಿಯಲ್ಲಿ ಸಂಘದ ಸರಕಾರ್ಯವಾಹ ಸುರೇಶ್ ಜೋಶಿ(ಭಯ್ಯಾಜಿ ಜೋಶಿ)ಯವರು ಸಭೆಯಲ್ಲಿ ಮಂಡಿಸುವ ಕಳೆದ ವರ್ಷದ ವಾರ್ಷಿಕ ವರದಿಯನ್ನು ವಿವರಿಸಿದರು.

**ಕರ್ನಾಟಕದ ನೆರೆ ಸಂತ್ರಸ್ತರಿಗೆ ಸಹಾಯಹಸ್ತ:** ಕಳೆದ ವರ್ಷ ಉತ್ತರ ಕರ್ನಾಟಕದಲ್ಲಿ ನೆರೆ ಉಂಟಾದಾಗ ಸಂಘವು ಸಂತ್ರಸ್ತರಿಗೆ ವ್ಯಾಪಕ ಸಹಾಯಹಸ್ತ ಚಾಚಿದೆ. ಪ್ರವಾಹದಲ್ಲಿ ಸಿಲುಕಿದ ಜನರ ರಕ್ಷಣೆ ಸೇರಿದಂತೆ ಪುನರ್ವಸತಿ ಕಾರ್ಯಕ್ಕೆ ಸುಮಾರು 2400 ಕಾರ್ಯಕರ್ತರು 180 ಗ್ರಾಮಗಳಿಗೆ ತೆರಳಿದ್ದರು. ಮಾತ್ರವಲ್ಲ ಸೇವಾಭಾರತಿಯ ಮೂಲಕ ಪುನರ್‌ನಿರ್ಮಾಣದಲ್ಲಿ ತೊಡಗಿದ್ದು , ಅದರಲ್ಲಿ ಈಗಾಗಲೇ 2 ಗ್ರಾಮಗಳಲ್ಲಿ 130 ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಲಾಗಿದೆ .13ಗ್ರಾಮಗಳಲ್ಲಿ 1600ಮನೆಗಳ ನಿರ್ಮಾಣ ಯೋಜನೆಗೆ ಸೇವಾ ಭಾರತಿ ಕ್ರಮ ಕೈಗೊಂಡಿದೆ.

**ಕಾಶ್ಮೀರ ವಿಲೀನ ಪ್ರಕ್ರಿಯೆಗೆ ಒತ್ತು:** ಕಳದೆ ವರ್ಷ ಅಕ್ಟೋಬರ್ 26 ರಂದು ಕಾಶ್ಮೀರ ವಿಲೀನ ದಿನವನ್ನಾಗಿ ಆಚರಿಸಲು ಕರೆ ನೀಡಿದ ಹಿನ್ನೆಲೆಯಲ್ಲಿ ದೇಶದ 2018 ಗ್ರಾಮಗಳಲ್ಲಿ 2491 ಕಾರ್ಯಕ್ರಮಗಳು ನಡೆದಿದ್ದು 99,380 ಮಹಿಳೆಯರು ಹಾಗೂ 3,08,708 ಪುರುಷರು ಭಾಗವಹಿಸಿದ್ದರು.

**ಹಿಂದೂಗಳು ಹೆದರುವ ಪ್ರಶ್ನೆಯೇ ಇಲ್ಲ:** ದೇಶದಲ್ಲಿ ಹಿಂದೂ ಭಯೋತ್ಪಾದನೆ ಎಂಬ ಗೂಬೆಯನ್ನು ಹಿಂದೂ ನಾಯಕರ ಮೇಲೆ ಕೂರಿಸುವ ಪ್ರಯತ್ನ ನಡೆಯುತ್ತಿದೆ.ಇಂತಹ ದುಷ್ಟ ರಾಜನೀತಿಯ ವಿರುದ್ಧ ದೇಶದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ನಡೆದ ಧರಣಿಯಲ್ಲಿ 10 ಲಕ್ಷಕ್ಕೂ ಅಧಿಕ ಜನರು ಭಾಗವಹಿಸಿದ್ದರು. ಹಿಂದೂ ಮುಖಂಡ ಶ್ರೀ ಇಂದ್ರೇಶ್ ಕುಮಾರ್ ಅವರ ಮೇಲೂ ಕೂಡಾ ಭಯೋತ್ಪಾದನೆಯ ಆರೋಪವನ್ನು ದುರುದ್ದೇಶಪೂರಕವಾಗಿ ಹೊರಿಸಲಾಗಿದೆ. ಈ ಬಗ್ಗೆ ನಿಚಿಯೂ ನಡೆಯುತ್ತಿದೆ. ಈ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಶ್ರೀ ಮನಮೋಹನ್ ವೈದ್ಯ , ಹಿಂದೂ ಭಯೋತ್ಪಾದನೆ ಎಂಬ ಗೂಬೆಯನ್ನು ಕೂರಿಸಿ ಹಿಂದೂಗಳ ದಮನಕ್ಕೆ ಯತ್ನಿಸಲಾಗುತ್ತಿದೆ. ಆದರೆ ನಾವು ತನಿಖೆಗೆ ಸದಾ ಸಿದ್ದ. ಅವರು ತಪ್ಪಿತಸ್ಥರಾದರೆ ಶಿಕ್ಷೆಯೂ ಆಗಲಿ. ಆದರೆ ನಿಷ್ಪಕ್ಷ ತನಿಖೆ ಆಗಬೇಕು. ಈಗ ಅಲ್ಲಿ ರಾಜಕೀಯ ದುರುದ್ದೇಶ ಎದ್ದು ಕಾಣುತ್ತಿದೆ ಎಂದ ಶ್ರೀ ಮನಮೋಹನ್ ಜೀ , ಸಂಘವು ಎಂದೂ ಕೂಡಾ ಹಿಂಸಾತ್ಮಕವಾಗಿ ನಡೆದುಕೊಂಡಿಲ್ಲ ಮುಂದೆ ನಡೆಯುವುದೂ ಇಲ್ಲ .ಸಂಘಕ್ಕೆ ತನ್ನ ಗುರಿಯ ಬಗ್ಗೆ ಸ್ಪಷ್ಟತೆ ಇದೆ .ಹಾಗಾಗಿ ಇಂತಹ ಆರೋಪಗಳಿಗೆ ಹೆದರುವುದಿಲ್ಲ. ಇದನ್ನು ಹಿಂದೂ ಭಯೋತ್ಪಾದನೆ ಎಂದು ಗೂಬೆ ಕೂರಿಸಿ ಅದರಿಂದ ಲಾಭ ಪಡೆಯುವವರು ಎಚ್ಚರವಹಿಸಲಿ ಎಂದರು.

**ರಾಮಮಂದಿರ ನಿರ್ಮಾಣವೇ ಗುರಿ:** ರಾಮಂದಿರದ ಕುರಿತು ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪು ಕೋಟ್ಯಂತರ ಹಿಂದೂಗಳಿಗೆ ಖುಷಿ ತಂದಿದೆ. ಮುಂದೆ ಅದೇ ಜಾಗದಲ್ಲಿ ರಾಮಮಂದಿರ ನಿರ್ಮಾಣ ಮಾಡುವುದೇ ನಮ್ಮ ಗುರಿ ಎಂದು ಅವರು ಹೇಳಿದರು.

**ಮುಂದಿನ ಚಿಂತನೆ ಏನು ? :** ದೇಶವು ಇಂದು ಜಿಹಾದಿ ಭಯೋತ್ಪಾದನೆ , ಚೀನಾ ಆಕ್ರಮಣ ,ಭ್ರಷ್ಟಾಚಾರದಂತಹ ಸಂಕಷ್ಟಕ್ಕೆ ತುತ್ತಾಗಿದೆ.ಈ ಬಗ್ಗೆ ಇಡೀ ಸಮಾಜವು ದೃಢ ನಿಲುವು ತಳೆಯಬೇಕಾಗಿದೆ. ಕೇವಲ ರಾಜಕೀಯ ಸ್ವಾರ್ಥ ಸಾಧನೆಗಾಗಿ ಹಿಂದೂ ನಾಯಕರ ಮೇಲೆ ಭಯೋತ್ಪಾದನೆಯ ಗೂಬೆ ಕೂರಿಸುವುದು , ಜಮ್ಮು ಕಾಶ್ಮೀರದಲ್ಲಿ ದೊಡ್ಡ ಸಮಸ್ಯೆ ಇದ್ದರೂ ದುರ್ಬಲ ರಾಜನೀತಿ, ಹೇಡಿತನದಿಂದಾಗಿ ದೇಶದ ಸಮಸ್ಯೆ ಹೆಚ್ಚಾಗಲು ಕಾರಣವಾಗಿದೆ ಎಂದವರು ವಿವರಿಸಿದರು.

**ಉದ್ಘಾಟನೆ:** ಪ್ರತಿನಿಧಿ ಸಭಾ ಉದ್ಘಾಟಿಸಿದ ಸರಸಂಘ ಚಾಲಕ ಮಾನ್ಯಶ್ರೀ ಮೋಹನ್ ಜೀ ಭಾಗವತ್ ರವರು ದೇಶದಲ್ಲಿ ಭ್ರಷ್ಟಾಚಾರದ ನಿರ್ಮೂಲನೆಗೆ ಕಠಿಣ ಹೋರಾಟದ ಅಗತ್ಯವಿದೆ ಎಂದು ನುಡಿದರು. ಸಂಘವು ಎಂದೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಭ್ರಷ್ಟ ವ್ಯಕ್ತಿಗಳನ್ನು ಬೆಂಬಲಿಸುವುದಿಲ್ಲ ಎಂದು ಅವರು ಈ ಸಂದರ್ಭದಲ್ಲಿ ನುಡಿದರು.

**ನಿರ್ಣಯಗಳು:** ದೇಶದಲ್ಲಿ ಪೆಡಂಬೂತದಂತೆ ಕಾಡುವ ಭ್ರಷ್ಟಾಚಾರದ ವಿರುದ್ಧ ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಮರ ಸಾರಿದೆ.ಒಂದರ ಹಿಂದೆ ಒಂದರಂತೆ ಹೊರಬರುತ್ತಿರುವ ಹಗರಣಗಳು, ಭ್ರಷ್ಟಾಚಾರ ದೇಶದ ಜನ ಜೀವನವನ್ನೇ ಕಂಗೆಡಿಸಿರುವುದನ್ನು ಅಖಿಲ ಭಾರತೀಯ ಪ್ರತಿನಿಧಿ ಸಭೆಯು ಗಂಭೀರವಾಗಿ ಪರಿಗಣಿಸಿದ್ದು, ಈ ಕುರಿತಾಗಿ ಸಭೆಯು ಕಠಿಣ ನಿರ್ಣಯ ಕೈಗೊಂಡಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕಾರಿಣಿ ಸದಸ್ಯ ರಾಮ್ ಮಾಧವ್ ಹೇಳಿದರು. ಅವರು ಪುತ್ತೂರಿನ ವಿವೇಕಾನಂದ ಕಾಲೇಜಿನ ಆವರಣದಲ್ಲಿ

ನಡೆಯುತ್ತಿರುವ ಅಖಿಲ ಭಾರತ ಪ್ರತಿನಿಧಿ ಸಭಾದಲ್ಲಿ ಕೈಗೊಂಡ ನಿರ್ಣಯಗಳ ಕುರಿತು ಸುದ್ದಿಗೋಷ್ಠಿ ಮೂಲಕ ಮಾಹಿತಿ ನೀಡಿದರು.

ಆಡಳಿತ ಸುಧಾರಣೆಯಲ್ಲಿ ಜನಾಭಿಪ್ರಾಯಕ್ಕೆ ಹೆಚ್ಚು ಅವಕಾಶ ನೀಡಬೇಕಾಗುತ್ತದೆ. ಹೀಗಾಗಿ ಆಡಳಿತದಲ್ಲಿ ಪಾರದರ್ಶಕತೆ, ನ್ಯಾಯಾಂಗ ವಿಭಾಗದಲ್ಲಿ ನಿಧಾನ ನ್ಯಾಯ ಪ್ರವೃತ್ತಿಗೆ ತಡೆ, ಹಣಬಲದ ರಾಜಕಾರಣ, ಅಪರಾಧ ಹಿನ್ನೆಲೆಯವರಿಗೆ ಮನ್ನಣೆ ನೀಡುವ ಪ್ರವೃತ್ತಿಯ ಬಗ್ಗೆ ತುರ್ತು ಗಮನ ನೀಡಬೇಕಾದ ಅನಿವಾರ್ಯತೆ ಇದೆ . ಆದರೆ ಇಂದು ಇದು ಒಂದು ವಿಷವೃತ್ತವಾಗಿ ಪರಿಣಮಿಸಿದೆ. ಇಂತಹ ಪ್ರವೃತ್ತಿಯಿಂದಲೇ ಇಂದು ಭ್ರಷ್ಟಾಚಾರ ಪೆಡಂಭೂತವಾಗಿ ಕಾಡುತ್ತಿದೆ. ಇನ್ನೊಂದು ಆಘಾತಕಾರಿ ಅಂಶವೆಂದರೆ ಸರ್ಕಾರದ ಅತ್ಯಂತ ಮಹತ್ವದ ಸ್ಥಾನದಲ್ಲಿರುವವರು ಭ್ರಷ್ಟಾಚಾರದಲ್ಲಿ ಸಿಲುಕಿರುವುದು ಒಂದೆಡೆಯಾದರೆ, ಪ್ರಧಾನಮಂತ್ರಿ ಸ್ಥಾನದಲ್ಲಿರುವವರು ತಪ್ಪಿತಸ್ಥರನ್ನು ರಕ್ಷಿಸುವ ಅಸಹಾಯಕತೆಯಲ್ಲಿರುವುದು ದುರಂತ ಎಂದು ಅವರು ಹೇಳಿದರು. ದೇಶದಲ್ಲಿ ಹೊರಬರುತ್ತಿರುವ ಹಗರಣಗಳು ದೇಶದ ಘನತೆಯ ಮೇಲೆ ಮಸಿ ಬಳಿದಿದೆ .ಸಾಮಾನ್ಯರಿಗೆ ಊಹಿಸಲಾರದಷ್ಟು ದೊಡ್ಡ ಮಟ್ಟದಲ್ಲಿ ಇದು ಚಾಚಿಕೊಂಡಿದ್ದು, ನ್ಯಾಯಾಂಗ, ಮಾಧ್ಯಮ ರಂಗವರೆಗೂ ಇದು ವ್ಯಾಪಿಸಿರುವುದು ದುರಂತ. ಸ್ವಾತಂತ್ರ್ಯೋತ್ತರ ಭಾರತವು ಭ್ರಷ್ಟಾಚಾರದ ಬಗ್ಗೆ ಪ್ರಬಲ ಆಂದೋಲನ ನಡೆಸಿ ಯಶಸ್ವಿಯಾಗಿತ್ತು. ಆದರೆ 1974 -75 ರ ಜೆ.ಪಿ ಆಂದೋಲನ, 1987-89 ರ ಬೊಫೋರ್ಸ್ ಹಗರಣದ ವಿರುದ್ಧ ನಡೆದ ಜನಾಂದೋಲನವು ಅಧಿಕಾರ ಬದಲಾವಣೆಯ ಹಂತವನ್ನು ತಲಪಿತ್ತು.ಆದರೂ ಈ ಭ್ರಷ್ಟಾಚಾರದ ಪ್ರಮಾಣ ಕುಗ್ಗಲಿಲ್ಲ ಎಂದು ಆರ್‌ಎಸ್‌ಎಸ್ ಅಭಿಪ್ರಾಯ ಪಟ್ಟಿದೆ. ಆರ್ಥಿಕ ಉದಾರೀಕರಣದ ನಂತರವಂತೂ ಭ್ರಷ್ಟಾಚಾರ ಹೆಚ್ಚು ಸಲೀಸಾಗಿ ವಿವಿಧ ಆಯಾಮಗಳನ್ನು ಪಡೆದುಕೊಂಡಿದೆ. 1992 ಶೇರು ಹಗರಣದಿಂದ ಹಿಡಿದು ಇಂದಿನ 2 ಜಿ ಸ್ಪೆಕ್ಟ್ರಂ ಹಗರಣಗಳಲ್ಲೆಲ್ಲಾ ಅದರ ವ್ಯಾಪ್ತಿ ಲೆಕ್ಕಕ್ಕೇ ಸಿಗದಂತಾಗಿದೆ ಎಂದು ಶ್ರೀ ಮಾಧವ್ ವಿವರಿಸಿದರು.

**ಕಪ್ಪುಹಣ ರಾಷ್ಟ್ರೀಯ ಸಂಪತ್ತು : ವ್ಯವಸ್ಥೆ ಶುದ್ಧೀಕರಣಕ್ಕೆ ಒಂದಾಗಿ:** ದೇಶದ ಹೊರಗೆ ಮತ್ತು ಒಳಗೆ ಶೇಖರಿಸಿಟ್ಟಿರುವ ಕಪ್ಪುಹಣವನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಿಸಿ ಸರಕಾರವು ವಶಪಡಿಸಿಕೊಳ್ಳಬೇಕು ಹಾಗೂ ಭ್ರಷ್ಟಾಚಾರದ ವಿರುದ್ಧ ದನಿ ಎತ್ತುವವರಿಗೆ ಸೂಕ್ತ ರಕ್ಷಣೆಯನ್ನೂ ಸರಕಾರ ನೀಡಬೇಕು ಎಂದು ಪ್ರತಿನಿಧಿ ಸಭೆಯು ಒತ್ತಾಯಿಸಿದೆ. ಭ್ರಷ್ಟಾಚಾರ ಎಂಬುದು ಯಾವುದೋ ವ್ಯಕ್ತಿ, ಗುಂಪಿಗೆ ಸೀಮಿತವಾಗಿಲ್ಲ. ಜನಜೀವನದ ಎಲ್ಲ ರಂಗಗಳನ್ನು ಬಾಧಿಸಿದೆ.ಆದ್ದರಿಂದ ಎಲ್ಲರೂ ಈ ಹೋರಾಟದಲ್ಲಿ ಒಂದಾಗಿ ವ್ಯವಸ್ಥೆಯನ್ನು ಸರಿಪಡಿಸಲು ಶ್ರಮಿಸಬೇಕು ಎಂದು ಪ್ರತಿನಿಧಿ ಸಭೆಯು ಆಗ್ರಹಿಸಿದೆ.

**ಚೀನಾದ ಅತಿಕ್ರಮಣಕ್ಕೆ ದುರ್ಬಲ ಪ್ರತಿಕ್ರಿಯೆ :ಕಳವಳ:** ಚೀನಾ ದೇಶವು ಆಕ್ರಮಣಕಾರಿ ತಂತ್ರಗಳನ್ನು ಕೈಗೊಳ್ಳುತ್ತಿದ್ದರೆ, ಕೇಂದ್ರ ಸರಕಾರ ತೀರ ದುರ್ಬಲ ಪ್ರತಿಕ್ರಿಯೆಯ ನೀಡುತ್ತಿದೆ.ಈ ಬಗ್ಗೆ ಅಖಿಲ ಭಾರತೀಯ ಪ್ರತಿನಿಧಿ ಸಭೆಯು ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ.ಈ ಕುರಿತಾಗಿ ದಿಟ್ಟ ನಿಲುವಿಗಾಗಿ ನಿರ್ಣಯವೊಂದನ್ನು ಕೈಗೊಂಡಿದೆ. ವಾಸ್ತವಿಕ ನಿಯಂತ್ರಣ ರೇಖೆಯ ಪರಸ್ಪರ ಒಪ್ಪಿಗೆಯನ್ನು ಗಾಳಿಗೆ ತೂರಿ ವಿಸ್ತರಣವಾದಿ ತಂತ್ರಗಳನ್ನು ಹೂಡಿರುವ ಚೀನಾದ ಪೀಪಲ್ ಲಿಬರೇಶನ್ ಆರ್ಮಿಯ ನಿರಂತರ ಗಡಿ ಉಲ್ಲಂಘನೆಯ ಪ್ರಯತ್ನಗಳ ನಂತರವೂ, ಕೇಂದ್ರ ಸರಕಾರದ ಉದಾಸೀನ ಪ್ರವೃತ್ತಿ ತಳೆದಿದೆ. ಅಲ್ಲದೆ ಚೀನಾದಿಂದ ಗಡಿ ಉಲ್ಲಂಘನೆ ಆಗಿಲ್ಲ ಎಂಬ ನಿಲುವಿನಿಂದ ಭಾರತದ ರಾಷ್ಟ್ರೀಯ ಹಿತಕ್ಕೆ ಧಕ್ಕೆಯುಂಟಾಗಲಿದೆ ಎಂದು ಆರ್‌ಎಸ್‌ಎಸ್ ಅಭಿಪ್ರಾಯಪಟ್ಟಿದೆ. ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ಪ್ರದೇಶದ ಸುಮಾರು 90 ಸಾವಿರ ಚದರ ಕಿ.ಮೀ ಭೂಮಿಯನ್ನು ಭಾರತವು ಅತಿಕ್ರಮಿಸಿಕೊಂಡಿದೆ ಎಂದು ಇತ್ತೀಚೆಗೆ ಹೇಳಿಕೊಂಡಿರುವ ಚೀನಾದ ದುರುದ್ದೇಶವು ಸ್ಪಷ್ಟವಾಗುತ್ತಿದೆ. ಹೀಗಾಗಿ ಅರುಣಾಚಲ ಪ್ರದೇಶ ಸೇರಿದಂತೆ ಪೂರ್ವೋತ್ತರ ಭಾರತದ ಬಗ್ಗೆ ನಾವು ಹೆಚ್ಚಿನ ಗಮನ ಕೊಡಬೇಕಾಗಿದೆ ಎಂದು ಸಭೆಯಲ್ಲಿ ಕಾಳಜಿ ವ್ಯಕ್ತಪಡಿಸಲಾಗಿದೆ. ಇದರ ಜೊತೆಗೆ ಟಿಬೆಟ್ ಪ್ರದೇಶದಲ್ಲಿರುವ ಕೈಲಾಸ ಮಾನಸ ಸರೋವರದಿಂದ ಉಗಮವಾಗುವ ಬ್ರಹ್ಮಪುತ್ರ ಮತ್ತು ಸಿಂಧುನದಿಗಳ ಪಾತ್ರದಲ್ಲಿ ಅಡಚಣೆ ಮಾಡುವ ಮೂಲಕ ನೀರಿನ ಹಕ್ಕನ್ನು ಚೀನಾ ಕಸಿದುಕೊಳ್ಳುತ್ತಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ದೇಶದಲ್ಲಿ ಸಮಸ್ಯೆ ಉಂಟಾಗಲಿರುವುದು ಒಂದು ಕಡೆಯಾದರೆ ಉಲ್ಫಾ ಉಗ್ರರಿಗೆ ಚೀನಾವು ಹಣ ಮತ್ತು ಶಸ್ತ್ರಾಸ್ತ್ರ ಪೂರೈಸುತ್ತಿರವುದು ಬೆಳಕಿಗೆ ಬಂದಿದೆ. ಅದಕ್ಕಾಗಿ ಸರಕಾರ ಈಗಲೇ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ಸಭೆ ಆಗ್ರಹಿಸಿದೆ.

**ಚೀನೀ ವಸ್ತು ಬಹಿಷ್ಕರಿಸಿ:** ಚೀನಾ ನಿರ್ಮಿತ ಆಟಿಕೆಗಳು,ಮೊಬೈಲ್ ಗಳು,ಇಲೆಕ್ಟ್ರಾನಿಕ್ ವಸ್ತುಗಳು ಕಡಿಮೆ ದರದಲ್ಲಿ ಭಾರತೀಯ ಮಾರುಕಟ್ಟೆಗೆ ಪ್ರವೇಶಿಸುತ್ತಿದೆ.ಇದರಿಂದಾಗಿ ನಮ್ಮ ದೇಶದ ಕೈಗಾರಿಕೆ , ಆರ್ಥಿಕತೆ , ಆರೋಗ್ಯ , ಪರಿಸರದ ಮೇಲೆ ತೀವ್ರ ಪರಿಣಾಮ ಬೀರಿದೆ ಎಂಬುದು ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ವಸ್ತುಗಳನ್ನು ಭಾರತೀಯರು ದೂರವಿಡುವ ಮೂಲಕ ದೇಶಭಕ್ತಿಯನ್ನು ಅಭಿವ್ಯಕ್ತಗೊಳಿಸಬೇಕು ಎಂದು ಪ್ರತಿನಿಧಿಸಭೆಯು ದೇಶವಾಸಿಗಳಿಗೆ ಕರೆ ನೀಡಿದೆ.

**ಕಟ್ಟೆಚ್ಚರ ಇರಲಿ:** ದೇಶದಲ್ಲಿ ಓಡಾಡುವ ವ್ಯಕ್ತಿಗಳ ಬಗ್ಗೆ ನಿಗಾ ಇಡಬೇಕಲ್ಲದೆ, ವೀಸಾ ನೀಡುವಿಕೆಯ ಕಡೆ ವಿಶೇಷ ಗಮನ ನೀಡಬೇಕು. ಆಯಕಟ್ಟಿನ ಪ್ರದೇಶದಲ್ಲಿ ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಚೀನೀ ಕಂಪೆನಿಗಳು ದೇಶಕ್ಕೆ ಪ್ರವೇಶಿಸದಂತೆ ತಡೆ ಹಾಕಬೇಕು. 1962 ರಲ್ಲಿ ಚೀನಾ ಆಕ್ರಮಿಸಿದ ನಮ್ಮ ಭೂಮಿಯ ಪ್ರತಿ ಇಂಚನ್ನು ವಾಪಸು ಪಡೆಯುವ ನಿರ್ಣಯವನ್ನು ಭಾರತದ ಸಂಸತ್ತು ಅಂಗೀಕರಿಸಬೇಕು , ಅಕ್ರಮ ನದಿ ತಿರುವು ಬಗ್ಗೆ ಮ್ಯಾನ್ಮಾರ್, ಬಾಂಗ್ಲಾದೇಶ ಮೊದಲಾದ ದೇಶಗಳನ್ನು ಸಂಘಟಿಸಬೇಕು ಎಂದು ಅಖಿಲಭಾರತ ಪ್ರತಿನಿಧಿ ಸಭೆಯು ಸರಕಾರವನ್ನು ಒತ್ತಾಯಿಸಿದೆ. ಸುದ್ದಿಗೋಷ್ಠಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರ ಪ್ರಮುಖ್ ಡಾ.ಮನಮೋಹನ್ ವೈದ್ಯ ಉಪಸ್ಥಿತರಿದ್ದರು.

# ಕೇರಳ ವಿಧಾನಸಭಾ ಚುನಾವಣೆ – ಒಂದು ಮುನ್ನೋಟ

"ದೇವರ ಸ್ವಂತ ದೇಶ" (Gods own Country) ಎಂದು ಕರೆಸಿಕೊಳ್ಳುವ ಕೇರಳದಲ್ಲೀಗ ಚುನಾವಣೆಯ ಕಾವು. ಏಪ್ರಿಲ್ 13ರಂದು ಒಂದೇ ಹಂತದಲ್ಲಿ ಎಲ್ಲಾ 140 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಎಡಪಕ್ಷಗಳು ಹಾಗೂ ಕಾಂಗ್ರೆಸ್ ವಿವಿಧ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡು ಬರುತ್ತಿವೆ. ಬಹುತೇಕ ಪಕ್ಷಗಳು ಒಂದು ಜಾತಿಗೆ, ಸಮುದಾಯಕ್ಕೆ, ಒಂದು ಪ್ರದೇಶಕ್ಕೆ ಸೀಮಿತವಾದವು. ಇವುಗಳೊಡನೆ ಅನುಕೂಲಕರ ಹೊಂದಾಣಿಕೆ– ಕಾಂಗ್ರೆಸ್, ಎಡಪಕ್ಷಗಳದ್ದು. ಬಿಜೆಪಿಯನ್ನು ದೇಶದ ಇತರೆಡೆ ಜಾತಿವಾದಿ, ಕೋಮುವಾದಿ ಎಂದು ಹೀಗಳೆಯುವ ಕಾಂಗ್ರೆಸ್, ಎಡಪಕ್ಷಗಳಿಗೆ ಕೇರಳದಲ್ಲಿರುವ ಮಿತ್ರಪಕ್ಷಗಳಲ್ಲಿ ಬಹುತೇಕ ಜಾತಿವಾದಿ–ಕೋಮುವಾದಿ ಪಕ್ಷಗಳೇ.



ಎಡಪಕ್ಷದ ನೇತೃತ್ವದ ಎಲ್.ಡಿ.ಎಫ್. ಕಳೆದ 5 ವರ್ಷ ಅಧಿಕಾರ ನಡೆಸಿದೆ. ನಿರಂತರ ಒಳಜಗಳ, ಹಗರಣಗಳ ಸರಕಾರವನ್ನು ಕೇರಳದ ಜನತೆ ಈ 5 ವರ್ಷಗಳಲ್ಲಿ ಕಂಡಿದ್ದಾರೆ. ಭೂ ಅಕ್ರಮಗಳಿಂದ ಹಿಡಿದು, ಅಂತರಾಷ್ಟ್ರೀಯ ಶಕ್ತಿಗಳಿಗೆ ಪ್ರೋತ್ಸಾಹದವರೆಗೆ– ಹಲವು ತಪ್ಪು ನಡೆಗಳಿಂದ ಕೂಡಿದ್ದ ಅವಧಿ ಇದು. ಶಬರಿಮಲೈ ದುರಂತದ ಸಂದರ್ಭದಲ್ಲಿ ಕೇರಳದ ಎಡರಂಗ ಸರಕಾರದ ನಿರ್ವಹಣೆ ವ್ಯಾಪಕ ಟೀಕೆಗೊಳಗಾಯಿತು. ಬೆಂಗಳೂರಿನ ಬಾಂಬ್‌ಸ್ಫೋಟಗಳಲ್ಲಿ ಅಪರಾಧಿಯಾದ ಮದನಿ ಬಂಧನಕ್ಕೆ ಸಹಕಾರ ನೀಡದ ಕೇರಳ ಸರಕಾರ ತನ್ನ ಒಲವು ಎತ್ತಕಡೆಗೆ ಎನ್ನುವುದನ್ನು ಜಗ್ಗಾಜ್ಜಾಹೀರಾಗಿದೆ. ಕಾಂಗ್ರೆಸ್ ಸಹಾ ಇದಕ್ಕೆ ಹೊರತಾಗಿ ನಡೆದುಕೊಂಡಿಲ್ಲ.

ಈ ಚುನಾವಣೆ ಬಿಜೆಪಿಯನ್ನು ಕೇರಳದ ಮತದಾನದ ಎದುರು ಮೂರನೇ ಶಕ್ತಿಯಾಗಿ ಮೂಡಿಸಲಿದೆ ಎಂಬುದು ಈಗಾಗಲೇ ನಿಶ್ಚಳವಾಗಿದೆ. ವಿವಿಧ ಮಾಧ್ಯಮ ಸಂಸ್ಥೆಗಳ ಸರ್ವೇಕ್ಷಣೆಗಳಲ್ಲಿ ಬಿಜೆಪಿ ಶೇ. 10 ರಷ್ಟು ಮತ ಪಡೆದು 3–4 ಕ್ಷೇತ್ರಗಳಲ್ಲಿ ಗೆಲ್ಲಲಿದೆ ಎಂಬ ವರದಿ ನೀಡಿವೆ. ಸುಮಾರು 25 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ವಿರೋಧಿಗಳಿಗೆ ತೀವ್ರವಾಗಿ ಸ್ಪರ್ಧೆಯೊಡ್ಡಿದ್ದಾರೆ. ಕಾಸರಗೋಡು, ಮಂಜೇಶ್ವರ, ಪಾಲ್ಘಾಟ್, ತಿರುವನಂತಪುರಗಳಲ್ಲಿ ಗೆಲುವಿನ ಹೊಸ್ತಿಲಲ್ಲಿದ್ದಾರೆ. ಕಾಸರಗೋಡು, ಮಂಜೇಶ್ವರಗಳಲ್ಲಿ ಇತ್ತೀಚೆಗಿನ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಎರಡನೇ ಸ್ಥಾನದಲ್ಲಿತ್ತು. ಕೇವಲ 4–5 ಸಾವಿರ ಮತಗಳ ಅಂತರ ಮಾತ್ರ ಇತ್ತು.

ಕಳೆದ ಒಂದು ವರ್ಷದಿಂದ ಎರಡೂ ಕ್ಷೇತ್ರಗಳಲ್ಲಿ ಮತಗಟ್ಟೆ ಮಟ್ಟದಲ್ಲಿ ಕೆಲಸ ನಡೆದಿದೆ. ಜೊತೆಗೆ ಎಂಡೋಸಲ್ಫಾನ್ ಸಮಸ್ಯೆ, ಮೀನುಗಾರರ ಸಮಸ್ಯೆ, ಮರಾಠಿ ಸಮುದಾಯದವರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿದೆ. ರಾಜ್ಯ ಅಧ್ಯಕ್ಷ ಶ್ರೀ ವಿ, ಮುರಳೀಧರನ್ ನೇತೃತ್ವದಲ್ಲಿ 'ಕೇರಳ ರಕ್ಷಾ ಪಾದಯಾತ್ರೆ' ನಡೆಸಿದೆ. 120ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಪ್ರಚಾರ ಕಾರ್ಯ ತೀವ್ರವಾಗಿ ನಡೆದಿದ್ದು ಕೇರಳದ ಕಾರ್ಯಕರ್ತರ ಜೊತೆಗೆ ಕರ್ನಾಟಕದ ಪ್ರಮುಖರೂ ಕೈ ಜೋಡಿಸಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಿದ್ದಾರೆ. ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ನಳಿನ್‌ಕುಮಾರ್ ಕಟೀಲು ಹಾಗೂ ಶ್ರೀ ಮೋನಪ್ಪ ಭಂಡಾರಿ, ಸಂಜೀವ ಮಠ್ಠಂದೂರು ನೇತೃತ್ವದಲ್ಲಿ 300ಕ್ಕೂ ಹೆಚ್ಚು ದಕ್ಷಿಣ ಕನ್ನಡದ ಬಿಜೆಪಿ ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಕೇರಳದ ಕಾರ್ಯಕರ್ತರನ್ನು ಹುರಿದುಂಬಿಸಿದ್ದಾರೆ. ಮಂಜೇಶ್ವರದ ಅಭ್ಯರ್ಥಿ ಶ್ರೀ ಕೆ. ಸುರೇಂದ್ರನ್ ಹಾಗೂ ಕಾಸರಗೋಡು ಅಭ್ಯರ್ಥಿ ಶ್ರೀ ಜಯಲಕ್ಷ್ಮೀ ಭಟ್‌ರವರ ಕುರಿತು ವ್ಯಾಪಕ ಸದಭಿಪ್ರಾಯ ನಿರ್ಮಾಣವಾಗಿದೆ. ಲಭ್ಯ ವಾತಾವರಣದ ಸದುಪಯೋಗದಿಂದ ಕೇರಳದಲ್ಲಿ ಬಿಜೆಪಿ ಈ ಬಾರಿ ಖಾತೆ ತೆರೆಯಲಿದೆ ಎಂಬ ಬಲವಾದ ವಿಶ್ವಾಸ ಎಲ್ಲರಲ್ಲಿ ಮೂಡಿದೆ.

●

# ತಮಿಳುನಾಡು ಚುನಾವಣಾ ಪ್ರಚಾರದಲ್ಲಿ ಕರ್ನಾಟಕ ಬಿಜೆಪಿ ಕಾರ್ಯಕರ್ತರು

ಕೆಲವೇ ದಿನಗಳಲ್ಲಿ ತಮಿಳುನಾಡು ವಿಧಾನಸಭೆ ಚುನಾವಣೆ ನಡೆಯಲಿದೆ. ಚುನಾವಣಾ ಪ್ರಚಾರ ತೀವ್ರಗತಿಯಲ್ಲಿ ಸಾಗಿದೆ. ದಕ್ಷಿಣ ಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರ ಸ್ಥಾಪಿಸುವಲ್ಲಿ ನೆರವಾದ ರಾಜ್ಯದ ಬಿಜೆಪಿ ಕಾರ್ಯಕರ್ತರು ಇದೀಗ ತಮಿಳುನಾಡಿನಲ್ಲೂ ಬಿಜೆಪಿಯ ಬಲ ಹೆಚ್ಚಿಸಲು ನೆರವಾಗಿದ್ದಾರೆ. ಚೆನ್ನೈನಲ್ಲಿ ಬಿಜೆಪಿ ಕೇಂದ್ರ ಚುನಾವಣಾ ಕಾರ್ಯಾಲಯ ನಿರ್ವಹಣೆಯಲ್ಲಿ ರಾಜ್ಯದ ಪ್ರಮುಖ ಕಾರ್ಯಕರ್ತರು ತಮಿಳುನಾಡು ಕಾರ್ಯಕರ್ತರೊಂದಿಗೆ ಕೈ ಜೋಡಿಸಿದ್ದಾರೆ. ಚುನಾವಣೆ ನಿರ್ವಹಣೆಯ ಕಾರ್ಯ ವ್ಯವಸ್ಥಿತವಾಗಿ ನಡೆಯಲು ನೆರವಾಗಿದ್ದಾರೆ.




ತಮಿಳುನಾಡಿನ ಅನೇಕ ಕ್ಷೇತ್ರಗಳಲ್ಲಿ ರಾಜ್ಯದ ವಿವಿಧ ಸ್ಥಳಗಳಿಂದ ಬಿಜೆಪಿ ಕಾರ್ಯಕರ್ತರು ತೆರಳಿ ಬೂತ್‌ಮಟ್ಟದಲ್ಲಿ ಅಲ್ಲಿಯ ಕಾರ್ಯಕರ್ತರೊಡನೆ ಸೇರಿ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ. ವಿಶೇಷವಾಗಿ ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಶಿವಮೊಗ್ಗ, ಭದ್ರಾವತಿಯ ಬಿಜೆಪಿ ಕಾರ್ಯಕರ್ತರು ತಮಿಳುನಾಡಿಗೆ ತೆರಳಿ ಚುನಾವಣಾ ಕಾರ್ಯದಲ್ಲಿ ತೊಡಗಿದ್ದಾರೆ. ಕನ್ಯಾಕುಮಾರಿ ಜಿಲ್ಲೆಯ ಎಲ್ಲಾ 6 ಕ್ಷೇತ್ರಗಳು, ಹೊಸೂರು, ಥಳಿ ಮುಂತಾದ ಕ್ಷೇತ್ರಗಳಲ್ಲಿ ನಮ್ಮ ರಾಜ್ಯದ ಕಾರ್ಯಕರ್ತರು ಸ್ಥಳೀಯ ಕಾರ್ಯಕರ್ತರ ಉತ್ಸಾಹ ಹೆಚ್ಚಿಸಿದ್ದಾರೆ. ಬಿಜೆಪಿ ಪರ ಅಲೆ ನಿರ್ಮಿಸಲು ಶ್ರಮಿಸುತ್ತಿದ್ದಾರೆ. ಬೆಂಗಳೂರಿನ ಕೆ.ಆರ್.ಪುರಂ, ಬೊಮ್ಮನಹಳ್ಳಿ, ಬಿಟಿಎಂ, ಮಹದೇವಪುರ, ಆನೇಕಲ್ ಕ್ಷೇತ್ರದ ಕಾರ್ಯಕರ್ತರು ಹೊಸೂರು ಹಾಗೂ ಗಡಿಭಾಗದ ಗ್ರಾಮಗಳಿಗೆ ತೆರಳಿ ಪ್ರಚಾರ ಕಾರ್ಯ ಕೈಗೊಂಡಿದ್ದು ವಿಶೇಷವಾಗಿ 14 ಕ್ಷೇತ್ರಗಳಲ್ಲಿ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ.

ಕಳೆದ ತಿಂಗಳು ಬೆಂಗಳೂರಿನಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ ಹಾಗೂ ತಮಿಳುನಾಡು ಅಧ್ಯಕ್ಷ ಶ್ರೀ ಪೊನ್ ರಾಧಾಕೃಷ್ಣರವರು ಜಂಟಿಯಾಗಿ ಸಭೆನಡೆಸಿ ರಾಜ್ಯದ ತಮಿಳರಿಗೆ ಕೋರಿಕೆ ಇಟ್ಟಿದ್ದಕ್ಕೆ ಪ್ರತಿಯಾಗಿ ರಾಜ್ಯದ ತಮಿಳರು ತಮಿಳುನಾಡು ಚುನಾವಣೆಯಲ್ಲಿ ತನು, ಮನ, ಧನದಿಂದ ಬಿಜೆಪಿಗೆ ಸಹಾಯ ಮಾಡುವ ವಾಗ್ದಾನ ನೀಡಿದ ಪ್ರಕಾರ ಸಂಪೂರ್ಣ ಸಹಕಾರ ನೀಡಿದ್ದಾರೆ. ತಮಿಳುನಾಡಿನಲ್ಲೂ ಬಿಜೆಪಿಯನ್ನು ಬಲಗೊಳಿಸುವ ಈ ಅವಕಾಶದಲ್ಲಿ ರಾಜ್ಯ ಬಿಜೆಪಿ ಎಲ್ಲಾ ರೀತಿಯ ಸಹಾಯ ಹಸ್ತ ಚಾಚಿದೆ.

●

# ರಾಜ್ಯ ಬಿಜೆಪಿ ಕಾರ್ಯಾಲಯದ ಹೊಸ ಕಟ್ಟಡ

ರಾಜ್ಯ ಬಿಜೆಪಿ ಕಾರ್ಯಾಲಯವು ಹೊಸ ಕಟ್ಟಡ ಹೊಂದುತ್ತಿದೆ. ಬೆಂಗಳೂರಿನ ಮಲ್ಲೇಶ್ವರಂ ಭಾಗದಲ್ಲಿ ತಲೆ ಎತ್ತಿ ನಿಂತಿರುವ ಹೊಸ ಕಟ್ಟಡದ ಪ್ರವೇಶೋತ್ಸವ ಎಪ್ರೀಲ್ 27 ಹಾಗೂ 28 ರಂದು ನಡೆಯಲಿದೆ.

ದಿ. ಶ್ರೀ ಜಗನ್ನಾಥ್‌ರಾವ್ ಜೋಷಿಯವರು ಕರ್ನಾಟಕದಲ್ಲಿ ಜನಸಂಘದ ಸಮಯದಿಂದಲೂ ಪಕ್ಷದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಅವರ ಪ್ರಖರ ವ್ಯಕ್ತಿತ್ವದ ಪ್ರಭಾವದಿಂದಲೇ ಅನೇಕ ಕಾರ್ಯಕರ್ತರು ಸ್ಫೂರ್ತಿ ಪಡೆದಿದ್ದರು. ಬಿಜೆಪಿ ಕಾರ್ಯಾಲಯದ ಹೊಸ ಕಟ್ಟಡಕ್ಕೆ ಶ್ರೀಯುತ ಜಗನ್ನಾಥ್‌ರಾವ್ ಜೋಷಿಯವರ ಸ್ಮರಣಾರ್ಥ "ಜಗನ್ನಾಥ ಭವನ" ಎಂದು ಹೆಸರಿಡಲಾಗಿದೆ.

ಪ್ರಾರಂಭೋತ್ಸವದ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ನಾಯಕ ಶ್ರೀ ಎಲ್.ಕೆ. ಅಡ್ವಾಣಿಯವರು ಉಪಸ್ಥಿತರಿರುತ್ತಾರೆ. ಜನಸಂಘದ ಕಾಲದಿಂದಲೂ ಪಕ್ಷಕ್ಕಾಗಿ ದುಡಿದವರ ಸಂಕೇತವಾಗಿ ಎದ್ದು ನಿಂತಿರುವ ಈ ಕಟ್ಟಡ ಮುಂಬರುವ ದಿನಗಳಲ್ಲಿ ರಾಜ್ಯ ರಾಜಕಾರಣದ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆಯುವುದರಲ್ಲಿ ಸಂದೇಹವಿಲ್ಲ. ಡಾ॥ ಶ್ಯಾಮಪ್ರಸಾದ ಮುಖರ್ಜಿ, ಪಂ. ದೀನದಯಾಳ ಉಪಾಧ್ಯಾಯಜಿ, ಮಾನ್ಯಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ಎಲ್.ಕೆ. ಅಡ್ವಾಣಿ ಮುಂತಾದ ಹಿರಿಯ ನಾಯಕರಲ್ಲದೇ ಕರ್ನಾಟಕದವರೇ ಆದ ಶ್ರೀ ಜಗನ್ನಾಥರಾವ್ ಜೋಷಿ, ಶ್ರೀ ಭಾವೂರಾವ್ ದೇಶಪಾಂಡೆ, ಶ್ರೀ ವರದರಾಜ ಶೆಟ್ಟಿ, ಶ್ರೀ ಶ್ವೇತಾದ್ರಿ ಮುಂತಾದವರ ಆದರ್ಶದ ಬೆಳಕಲ್ಲಿ ತಮ್ಮ ರಾಜಕೀಯ ಜೀವನವನ್ನು ರೂಪುಗೊಳಿಸಲಿಚ್ಛಿಸುವ ಕನಸು ಹೊತ್ತ ಸಾವಿರಾರು ಯುವ ಹೃದಯಗಳಿಗೆ ಕೂಡ ಈ ಭವನ ಕರ್ಮಕ್ಷೇತ್ರವಾಗಲಿದೆ.

ಕಟ್ಟಡ ಪ್ರಾರಂಭೋತ್ಸವ ಸಮಾರಂಭಕ್ಕೆ ಎಲ್ಲರಿಗೂ ಆದರದ ಸ್ವಾಗತ.

●

ಧ್ಯೇಯ ಕಮಲ ಮಾಸ ಪತ್ರಿಕೆ

ಧ್ಯೇಯಕಮಲ ಪತ್ರಿಕೆಗೆ ತಮ್ಮ ವಾರ್ಷಿಕ ಚಂದಾ ಅವಧಿ ಮುಕ್ತಾಯಗೊಳ್ಳುವ ತಿಂಗಳನ್ನು ಈ ಸಂಚಿಕೆಗೆ ಅಂಟಿಸಿರುವ ತಮ್ಮ ವಿಳಾಸದ ಚೀಟಿಯ ಮೂಲೆ ಭಾಗದಲ್ಲಿ ನಮೂದಿಸಲಾಗಿದೆ. ದಯವಿಟ್ಟು ಅವಧಿಗೆ ಮುನ್ನ ರೂ. 100/- ವಾರ್ಷಿಕ ಚಂದಾ ಹಣವನ್ನು ಎಂ.ಓ.ಮೂಲಕ 'ಧ್ಯೇಯಕಮಲ' ಕಾರ್ಯಾಲಯಕ್ಕೆ ಕಳುಹಿಸಿತಮ್ಮ ಚಂದಾ ಸದಸ್ಯತ್ವವನ್ನು ನವೀಕರಿಸುವುದು. ವಿವರಗಳಿಗೆ ಧ್ಯೇಯ ಕಮಲ ಪ್ರಕಾಶನ ವಿಭಾಗವನ್ನು ಸಂಪರ್ಕಿಸಿ.

– ಸಂಪಾದಕರು

# ಬಿಜೆಪಿ ಮಹಿಳಾ ಮೋರ್ಚಾ–ಕರ್ನಾಟಕ

# ಬೃಹತ್ ಜನ ಸಂಘರ್ಷ ಆಂದೋಲನ

* ಮನೆ–ಮನೆ ಸಂಪರ್ಕ * ತಾಲ್ಲೂಕು ಕೇಂದ್ರಗಳಲ್ಲಿ ಧರಣಿ * ಜಿಲ್ಲಾ ಕೇಂದ್ರಗಳಲ್ಲಿ ಪಾದಯಾತ್ರೆ * ರಾಜ್ಯ ಮಟ್ಟದಲ್ಲಿ ಬೃಹತ್ ರ್‍ಯಾಲಿ

**ಯುಪಿಎ ಸರ್ಕಾರದ ವಿಫಲ ಆರ್ಥಿಕ ನೀತಿಗಳು ಹಾಗೂ ಬದ್ಧತೆಯ ಕೊರತೆ ನಮ್ಮನ್ನು ಇಂತಹ ಭಯಾನಕ ಬೆಲೆ ಏರಿಕೆಯ ಪರಿಸ್ಥಿತಿಗೆ ತಂದೊಡ್ಡಿದೆ. ಸಾಮಾನ್ಯ ಜನ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಹಣದುಬ್ಬರದ ಪ್ರಮಾಣವು ಏರಿಕೆಯಾಗಿರುವುದನ್ನು ಇತಿಹಾಸದ ದಾಖಲೆಗಳು ಎತ್ತಿ ತೋರಿಸುತ್ತವೆ.**

**ಯುಪಿಎ ಸರ್ಕಾರದ ಇಂಥ ಭ್ರಷ್ಟ ನಡವಳಿಕೆಯ ವಿರುದ್ಧ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಬೃಹತ್ ಜನ ಸಂಘರ್ಷ ಆಂದೋಲನವನ್ನು ಹಮ್ಮಿಕೊಂಡಿದೆ. ದೇಶವನ್ನು ಭ್ರಷ್ಟತೆಯಿಂದ ಮುಕ್ತಗೊಳಿಸಲು ಜನತೆಗೆ ಕರೆನೀಡಿರುವ ಮಹಿಳಾ ಮೋರ್ಚಾ ರಾಜ್ಯವ್ಯಾಪಿಯಾಗಿ ಹಮ್ಮಿಕೊಂಡಿರುವ ಜನ ಸಂಘರ್ಷ ಆಂದೋಲನದಲ್ಲಿ ಕೇಂದ್ರದ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರವಾಗಿ ದನಿ ಎತ್ತಲಿದೆ.**

**ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಒಂದಾದ ಮೇಲೆ ಒಂದರಂತೆ ಲಕ್ಷಾಂತರ ಕೋಟಿಗಳ ಹಲವಾರು ಹಗರಣಗಳು ಬೆಳಕಿಗೆ ಬಂದಿದೆ.**

- **ಆದರ್ಶ ಸೊಸೈಟಿ ಹಗರಣ:** ಕಾರ್ಗಿಲ್‌ನಲ್ಲಿ ಹುತಾತ್ಮರಾದ ಯೋಧರ ಕುಟುಂಬಸ್ಥರಿಗಾಗಿ ನಿರ್ಮಿಸಲಾದ ಆದರ್ಶ ಸೊಸೈಟಿ ವಸತಿ ಗೃಹಗಳನ್ನು ಸ್ವಜನ ಪಕ್ಷಪಾತ ಮಾಡಿ, ಬಂಧುಗಳಿಗೆ, ಆಪ್ತೇಷ್ಟರಿಗೆ ಕೊಡಿಸಿದ್ದಾರೆ.
- **ಓಟಿಗಾಗಿ ನೋಟು:** ಪರಮಾಣು ಒಪ್ಪಂದದ ಚರ್ಚೆಯಲ್ಲಿ ಸರಕಾರದ ಪರ ಮತ ಚಲಾಯಿಸಲು ಲಂಚ ನೀಡಿದ ಆರೋಪ.
- **ಸಿ.ಬಿ.ಐ. ದುರ್ಬಳಕೆ:** ರಾಜಕೀಯ ಎದುರಾಳಿಗಳ ವಿರುದ್ಧ ತನಿಖಾ ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪ.
- **ಕಾಮನ್‌ವೆಲ್ತ್ ಗೇಮ್ಸ್ ಹಗರಣ:** ಕಾಂಗ್ರೆಸ್ ಸಂಸದ ಹಾಗೂ ಸಂಘಟನಾ ಸಮಿತಿ ಅಧ್ಯಕ್ಷ ಶ್ರೀ ಸುರೇಶ್ ಕಲ್ಮಾಡಿ ನೇತೃತ್ವದ ದೆಹಲಿ ಕಾಮನ್‌ವೆಲ್ತ್ ಗೇಮ್ಸ್‌ನ ಬಹುಕೋಟಿ ಹಗರಣ. 70 ಕ್ಕೂ ಹೆಚ್ಚು ದೇಶಗಳು ಪಾಲ್ಗೊಂಡಿದ್ದ ಕ್ರೀಡಾಕೂಟದಲ್ಲಿ ಭಾರತದ ಮಾನವನ್ನು ಹರಾಜು ಹಾಕಿದ್ದಲ್ಲದೆ, ಸಾವಿರಾರು ಕೋಟಿ ರೂಪಾಯಿಗಳು ನುಂಗಿ ಸ್ವಾಹಾ ಮಾಡಿದ ಆರೋಪ.
- **2ಜಿ ಹಗರಣ:** ಮಾಜಿ ಕೇಂದ್ರ ಸಚಿವ ಶ್ರೀ ಎ. ರಾಜಾ ಸೂತ್ರಧಾರಿಯಾಗಿರುವ ಸುಮಾರು 1.70 ಲಕ್ಷ ಕೋಟಿ ರೂಪಾಯಿ ಮೊತ್ತದ 2ಜಿ ತರಂಗಾಂತರ ಹಂಚಿಕೆ ಹಗರಣ ದೇಶದ ಬಹುದೊಡ್ಡ ಹಗರಣವಾಗಿದೆ.
- ಹಸನ್ ಅಲಿಯ ಅಕ್ರಮ ತೆರಿಗೆ ವಂಚನೆ ಸುಮಾರು 71 ಸಾವಿರ ಕೋಟಿ ರೂಪಾಯಿಗಳು.

**ಹೀಗೆ ಹಲವಾರು ಹಗರಣಗಳಿಗೆ ಯು.ಪಿ.ಎ. ಸರ್ಕಾರ ಆಶ್ರಯ ನೀಡಿದೆ. ಇದರ ಜೊತೆಯಲ್ಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರ ಜೀವನ ಅಸ್ತವ್ಯಸ್ತವಾಗಿದೆ. ಅವರ ಮಾಸಿಕ ಬಜೆಟ್‌ಗೆ ಹೊರೆ ಹಾಕಿದಂತಾಗಿದೆ.**

**ಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. ಇದರ ನೇರ ಪರಿಣಾಮ ಮಹಿಳೆಯರ ಮೇಲೆ.**

- **ಅಕ್ಕಿ ರಫ್ತು ಹಗರಣ:** ಯು.ಪಿ.ಎ. ಸರ್ಕಾರದ ಮೊದಲ ಅವಧಿಯಲ್ಲಿ ನಡೆದ ಈ ಹಗರಣದಿಂದ ದೇಶೀಯ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಮಿತಿ ಮೀರಿ ಏರಿಕೆಯಾಗಿದೆ.
- **ಸಕ್ಕರೆ, ಗೋಧಿ ರಫ್ತು ಹಗರಣ:** ಭಾರತದ ಗೋದಾಮುಗಳಲ್ಲಿ ದಾಸ್ತಾನಿದ್ದ ಸಕ್ಕರೆ, ಗೋಧಿಯ ಹೊರತಾಗಿಯೂ, ವಿದೇಶಗಳಿಂದ ದುಬಾರಿ ಬೆಲೆಗೆ ಆಮದು ಮಾಡಿಕೊಂಡಿದ್ದು, ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ.
- ಕಳೆದ 5 ವರ್ಷಗಳಲ್ಲಿ ಅಗತ್ಯವಸ್ತುಗಳ ಬೆಲೆ ಮೂರು ಪಟ್ಟು ಹೆಚ್ಚಾಗಿದೆ. ಅಕ್ಕಿಯ ಬೆಲೆ ರೂ. 10/– ರಿಂದ ರೂ. 40/– ಕ್ಕೆ, ಸಕ್ಕರೆ ಬೆಲೆ ರೂ. 50/–ಕ್ಕೆ ಹಾಗೂ ಎಣ್ಣೆ ಬೇಳೆ ಕಾಳುಗಳ ಬೆಲೆ ರೂ. 100/– ರವರೆಗೆ ಏರಿಕೆಯಾಗಿದೆ. ಆ ಮೂಲಕ ಜನತೆಯನ್ನು ತತ್ತರಿಸುವಂತೆ ಮಾಡಿದೆ.

**ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿಕೆಗೆ ಕೇಂದ್ರದ ಕಾಂಗ್ರೆಸ್‌ನ ಮಹಾ ಭ್ರಷ್ಟಾಚಾರವೇ ಮೂಲ ಕಾರಣವಾಗಿದೆ. ಹಗರಣಗಳ ಹಾವಳಿ, ಬೆಲೆ ಏರಿಕೆ, ಮತಾಂತರ, ನಕ್ಸಲ್ ಚಟುವಟಿಕೆ, ಭಯೋತ್ಪಾದನೆಗಳಿಂದ ಕೇಂದ್ರದ ಯು.ಪಿ.ಎ. ಸರ್ಕಾರವು ದೇಶವನ್ನು ಅಧೋಗತಿಗೆ ತಳ್ಳುತ್ತಾ ಸಾಮಾನ್ಯ ಜನರ ಬದುಕನ್ನು ದುಸ್ತರವಾಗಿಸಿದೆ.**

ಇಂಥ ಕೆಟ್ಟ ಆಡಳಿತದ ವಿರುದ್ಧ ಮಹಿಳಾ ಮೋರ್ಚಾ ಆಂದೋಲನವನ್ನು ಹಮ್ಮಿಕೊಂಡಿದೆ. ●

# ಆಜೀವನ ಸಹಯೋಗ ನಿಧಿ

ಬಿಜೆಪಿ ಒಂದು ವಿಶಿಷ್ಟ ರಾಜಕೀಯ ಪಕ್ಷ. ತನ್ನ ದೃಢವಾದ ರಾಷ್ಟ್ರೀಯ ನಿಲುವು, ದೇಶದ ಗಂಭೀರ ಸಮಸ್ಯೆಗಳ ನಿವಾರಣೆ ಬಗ್ಗೆ ಇರುವ ಸಕಾರಾತ್ಮಕ ರಾಷ್ಟ್ರೀಯ ದೃಷ್ಟಿಕೋನ ಮತ್ತು ವೈಶಿಷ್ಟ್ಯಪೂರ್ಣ ಸಂಘಟನಾತ್ಮಕ ರಚನೆಗಳಿಂದಾಗಿ ಬಿಜೆಪಿ ಇಂದು ಎಲ್ಲ ರಾಜಕೀಯ ಪಕ್ಷಗಳ ಮಧ್ಯೆ ವಿಭಿನ್ನ ರಾಜಕೀಯ ಪಕ್ಷವಾಗಿ ಪರಿಗಣಿಸಲ್ಪಟ್ಟಿದೆ. ರಾಷ್ಟ್ರೀಯ ಸಿದ್ಧಾಂತದಿಂದಾಗಿ ಇಡೀ ದೇಶದಾದ್ಯಂತ ಸಂಘಟನಾತ್ಮಕ ಜಾಲವನ್ನು ಬಿಜೆಪಿ ವಿಸ್ತರಿಸಿಕೊಂಡಿದೆ.

ಬಿಜೆಪಿ ಬೂತ್‌ನಿಂದ, ರಾಷ್ಟ್ರೀಯ ಮಟ್ಟದವರೆಗೆ ವಿವಿಧ ಸಮಿತಿಗಳನ್ನು ಹೊಂದಿದೆ. ಪಕ್ಷ ಸಂಘಟನೆಯನ್ನು **ಕ್ರಿಯಾಶೀಲವಾಗಿಟ್ಟು ಕಾರ್ಯತತ್ಪರಗೊಳಿಸಲು ನಾಲ್ಕು ಪ್ರಮುಖ ಅಂಗಗಳಾದ ಕಾರ್ಯಕರ್ತ, ಕಾರ್ಯಕ್ರಮ, ಕಾರ್ಯಾಲಯ, ಕೋಶಗಳನ್ನು ಸುಸ್ಥಿತಿಯಲ್ಲಿರಿಸುವುದು ಅವಶ್ಯಕ.** ಪಕ್ಷ ಸಕ್ರಿಯವಾಗಿರಬೇಕಾದರೆ ಕ್ರಿಯಾಶೀಲ ಕಾರ್ಯಕರ್ತನಿರಬೇಕು. ಆತನೇ ನಮ್ಮ ಕಾರ್ಯದ ಆಧಾರ. ಆತನನ್ನು ಸಿದ್ಧಗೊಳಿಸಲು, ಬೆಳೆಸಲು, ಕಾರ್ಯಕ್ರಮಗಳನ್ನು ನಡೆಸಲು ಮತ್ತು ಪಕ್ಷದ ಕಾರ್ಯಾಲಯವನ್ನು ಸುಸಜ್ಜಿತವಾಗಿಡಲು ನಿಧಿಯ (ಕೋಶ) ಅವಶ್ಯಕತೆ ಇದೆ.

ರಾಜಕೀಯ ಸಂಘಟನೆಯಾಗಿರುವ ಬಿಜೆಪಿ ತನ್ನ ಬೆಳವಣಿಗೆಗೆ ನಿಧಿ ಸಂಗ್ರಹಿಸಲು ತನ್ನ ಕಾರ್ಯಕರ್ತರು ಮತ್ತು ಹಿತೈಷಿಗಳನ್ನು ಅವಲಂಬಿಸಿದೆ. ಪಕ್ಷದ ಅಭ್ಯುದಯಕ್ಕೆ ನಿರಂತರವಾಗಿ ನಿಧಿ ಸಂಗ್ರಹಿಸಲು ಪಕ್ಷ "**ಆಜೀವನ ಸಹಯೋಗ ನಿಧಿ**" ಯೋಜನೆಯನ್ನು ಅಳವಡಿಸಿಕೊಂಡಿದೆ. ಈ ಕಾರ್ಯಕ್ರಮದನ್ವಯ ಹಿತೈಷಿಗಳಿಂದ ಅವರ ಶಕ್ತ್ಯಾನುಸಾರ ರೂ 1000, ರೂ 5000, ರೂ 10.000 ಗಳ ದೇಣಿಗೆಯನ್ನು ಪ್ರತಿ ವರ್ಷ ಚೆಕ್ / ಡಿಡಿ ಮೂಲಕ ಪಕ್ಷದ ಹೆಸರಿಗೆ ಸಂಗ್ರಹಿಸಲಾಗುತ್ತದೆ. ಜನಸಂಘದ ಕಾಲದಲ್ಲಿ ಮಧ್ಯಪ್ರದೇಶದಲ್ಲಿ ಶ್ರೀ ಕುಶಭಾವೂ ಠಾಕ್ರೆಯವರು ಈ ಯೋಜನೆಯನ್ನು ಜಾರಿಗೆ ತಂದರು. 1997 ರಲ್ಲಿ ಅಂದಿನ ಬಿಜೆಪಿ ಅಧ್ಯಕ್ಷರಾಗಿದ್ದ ಮಾನ್ಯಶ್ರೀ ಲಾಲಕೃಷ್ಣ ಅಡ್ವಾನಿಯವರು ಜೈಪುರ ಅಧಿವೇಶನದಲ್ಲಿ "**ಆಜೀವನ ಸಹಯೋಗ ನಿಧಿ**" ಯೋಜನೆಯನ್ನು ಘೋಷಿಸಿದರು.

**ಕಳೆದ ಫೆಬ್ರುವರಿ 1 ರಿಂದ ರಾಜ್ಯದಲ್ಲಿ ಪ್ರಾರಂಭಗೊಂಡ ಆಜೀವನ ಸಹಯೋಗ ನಿಧಿ ಸಂಗ್ರಹ ಕಾರ್ಯ ಮುಂದುವರೆದಿದ್ದು ಈವರೆಗೆ ಒಟ್ಟು 53,84,262 (ಐವತ್ತೂರು ಲಕ್ಷ, ಎಂಬತ್ನಾಲ್ಕು ಸಾವಿರದ, ಇನ್ನೂರಾ ಅರವತ್ತೆರಡು) ರೂ.ಗಳು ಸಂಗ್ರಹವಾಗಿದೆ. ಸಹಯೋಗ ನಿಧಿಗೆ ದೇಣಿಗೆ ನಿಡಿದವರು ಹಾಗೂ ಸಂಗ್ರಹಿಸಿದ ಕಾರ್ಯಕರ್ತರು ಅಭಿನಂದನೆಗೆ ಪಾತ್ರರು.** ●

# ಎ.ಪಿ.ಎಂ.ಸಿ. ಚುನಾವಣೆಗಳು

ಸಹಕಾರಿ ವಲಯದಲ್ಲಿ ಎಪಿಎಂಸಿ ಒಂದು ಪ್ರಮುಖ ಅಂಗ. ರೈತರು ಬೆಳೆದ ವಸ್ತುಗಳನ್ನು ಮಾರಲು ರಾಜ್ಯವ್ಯಾಪ್ತಿಯಗಿ ವಿಸ್ತಾರಗೊಂಡಿರುವ ಮಾರಾಟ ಜಾಲ. ತಾಲ್ಲೂಕು ಮಟ್ಟದಲ್ಲಿ ಕೃಷಿಕರ ಬೆಳೆಗೆ ಸೂಕ್ತ ದರ ಒದಗಿಸುವಲ್ಲಿ ಎಪಿಎಂಸಿ ಪಾತ್ರ ಬಹುಮುಖ್ಯ. ಎಪಿಎಂಸಿ ಚುನಾವಣೆಗಳು ಶೀಘ್ರದಲ್ಲೆ ನಡೆಯಲಿದೆ. ಎಲ್ಲಾ ಸ್ಥಳಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಎಪಿಎಂಸಿ ಚುನಾವಣೆಗಳಲ್ಲಿ ಸ್ಪರ್ಧಿಸಲಿದ್ದು ಈ ಚುನಾವಣೆಗಳನ್ನು ನಾವೆಲ್ಲರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಕೃಷಿ, ಕೃಷಿ ಮಾರಾಟ ವಲಯದಲ್ಲಿ ಪಕ್ಷದ ಹಿಡಿತವನ್ನು ಬಲಪಡಿಸಬೇಕಾಗಿದ್ದು ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಬೇಕಿದೆ. ಸೂಕ್ತ ಅಭ್ಯರ್ಥಿಗಳನ್ನು ಗುರುತಿಸುವುದು, ಮತದಾರರ ಸಂಪರ್ಕ, ಸಿದ್ಧತಾ ಸಭೆಗಳು ಮುಂತಾದ ಪ್ರಕ್ರಿಯೆಗಳು ತೀವ್ರಗೊಳ್ಳಬೇಕಿದೆ. ಈ ಬಗ್ಗೆ ತುರ್ತುಗಮನ ಹರಿಸುವುದು ಅವಶ್ಯ. ●

# ವಿಶ್ವ ವಿಜೇತ ಭಾರತ

28 ವರ್ಷಗಳು, 6 ವಿಶ್ವಕಪ್‌ಗಳು ಕಳೆದ ನಂತರ ಭಾರತ ಕ್ರಿಕೆಟ್ ತಂಡ 2011ರ ವಿಶ್ವವಿಜೇತ ತಂಡವಾಗಿ ಹೊರಹೊಮ್ಮಿದೆ. ಮುಂಬೈಯಿಯ ವಾಂಖೇಡೆ ಕ್ರೀಡಾಂಗಣದಲ್ಲಿ ಶ್ರೀಲಂಕಾ ತಂಡವನ್ನು ಅಂತಿಮ ಪಂದ್ಯದಲ್ಲಿ ಬಗ್ಗುಬಡಿದ ಭಾರತ ತಂಡ ತನ್ನ ಈ ವಿಜಯವನ್ನು ಹಿರಿಯ ಆಟಗಾರ ಸಚಿನ್ ತೆಂಡೂಲ್ಕರ್‌ಗೆ ನೀಡುತ್ತಿರುವ ಕಾಣಿಕೆ ಎಂದು ಬಣ್ಣಿಸಿದೆ. ಎಂಟರ ಘಟ್ಟದಲ್ಲಿ ಆಸ್ಟ್ರೇಲಿಯಾ, ಉಪಾಂತ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಸೋಲಿಸಿ ಮುನ್ನಡೆದ ಭಾರತ ಅಗ್ರಪಟ್ಟಕ್ಕೇರಿ ಭಾರತೀಯರೆಲ್ಲರ ಹೃದಯದಲ್ಲಿ ದೇಶಪ್ರೇಮದ ಕಿಚ್ಚನ್ನು ಹೆಚ್ಚಿದೆ. ಪಂದ್ಯದ ನಂತರ ಹಿರಿಯ ಬಿಜೆಪಿ ನಾಯಕ ಶ್ರೀ ಎಲ್.ಕೆ. ಅಡ್ವಾಣಿಯವರು ಹೇಳಿದಂತೆ ಈ ವಿಜಯದಿಂದ ಭಾರತೀಯರೆಲ್ಲರಿಗೂ ತಾವು ಎಲ್ಲಾ ರಂಗದಲ್ಲೂ ವಿಶ್ವಕ್ಕೆ ಮುಂಚೂಣಿಯಲ್ಲಿ ನಿಲ್ಲಬಲ್ಲ ಸಾಮಾರ್ಥ್ಯ ಹೊಂದಿರುವ ಬಗ್ಗೆ ವಿಶ್ವಾಸ ಮೂಡಿದಂತಾಗಿದೆ. ಎಲ್ಲರಿಗೂ ದೇಶದ ಬಗ್ಗೆ ಹೆಮ್ಮೆಮೂಡಿಸಿದ ಇಂಥಹ ಕ್ಷಣ ಒದಗಿಸಿದ್ದಕ್ಕೆ ಭಾರತ ಕ್ರಿಕೆಟ್ ತಂಡಕ್ಕೆ ನಮ್ಮ ಅಭಿನಂದನೆಗಳು. ●

### ಜೈವಿಕ ಇಂಧನ ರಾಷ್ಟ್ರೀಯ ಕಾರ್ಯಾಗಾರ

# ಪೆಟ್ರೋಲಿಯಂ ಲಾಬಿಗೆ ಕೇಂದ್ರ ಶರಣು- ಶ್ರೀ ಗಡ್ಕರಿಜೀ

ಪೆಟ್ರೋಲಿಯಂ ಲಾಬಿ ತಡೆಗಟ್ಟುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿರುವುದೇ ರಾಷ್ಟ್ರದಲ್ಲಿ ಇನ್ನೂ ಜೈವಿಕ ಇಂಧನ ನೀತಿ ಅನುಷ್ಠಾನವಾಗದಿರಲು ಕಾರಣ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ನಿತಿನ್ ಗಡ್ಕರಿ ಆರೋಪಿಸಿದ್ದಾರೆ.

ರಾಜ್ಯ ಬಿಜೆಪಿ ಇಂಧನ ಪ್ರಕೋಷ್ಠ ಹಮ್ಮಿಕೊಂಡಿದ್ದ ಜೈವಿಕ ಇಂಧನ ಅಭಿವೃದ್ಧಿ ಮತ್ತು ಅನುಷ್ಠಾನ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕೇಂದ್ರದಲ್ಲಿ ಎನ್‌ಡಿಎ ಸರ್ಕಾರದ ಆಡಳಿತ ಅವಧಿಯಲ್ಲಿ ಜೈವಿಕ ಇಂಧನ ನೀತಿಯನ್ನು ರೂಪಿಸಿದೆ. ಈ ನೀತಿಯನ್ನು ರಾಷ್ಟ್ರದಲ್ಲಿ ಅನುಷ್ಠಾನಗೊಳಿಸಲು ಯುಪಿಎ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಈ ಸಲುವಾಗಿ ಪ್ರಧಾನಿಯವರನ್ನು ಭೇಟಿ ಮಾಡುವುದಾಗಿ ಅವರು ಹೇಳಿದರು.

ಜಗತ್ತಿನ ಶೇ.85ರಷ್ಟು ರಾಷ್ಟ್ರಗಳು ಇತ್ತೀಚಿನ ದಿನಗಳಲ್ಲಿ ಜೈವಿಕ ಇಂಧನ ಬಳಸುವತ್ತ ಮುಖ ಮಾಡಿವೆ. ಇದೇ ದಾರಿಯಲ್ಲಿ ಭಾರತವು ಸಹ ಮುಂದಾಗಬೇಕು. ಇದರ ಅನುಷ್ಠಾನದ ಜವಾಬ್ದಾರಿಯನ್ನು ಯೋಜನಾ ಆಯೋಗ ವಹಿಸಿಕೊಳ್ಳಬೇಕೆಂದ ಅವರು, ಕರ್ನಾಟಕದಲ್ಲಿ ಸರ್ಕಾರ ಈ ದೃಷ್ಟಿಯಿಂದ ತನ್ನ ಬಜೆಟ್‌ನಲ್ಲಿ ವಿಶೇಷ ಆದ್ಯತೆ ನೀಡುವ ವಿಶ್ವಾಸವಿದೆ ಎಂದು ನುಡಿದರು.

ಜೈವಿಕ ಇಂಧನ ಮೂಲದ ಸಸ್ಯ ಬೆಳೆಯುವುದರ ಮೂಲಕ ಕೃಷಿ ಕ್ಷೇತ್ರವನ್ನು ಆರ್ಥಿಕವಾಗಿ ಬಲಗೊಳಿಸಬಹುದು, ರೈತರನ್ನು ಆರ್ಥಿಕವಾಗಿ ಬಲಾಢ್ಯಗೊಳಿಸಿ ದೇಶದ ಜಿಡಿಪಿಯಲ್ಲಿ ಸಹ ಏರಿಕೆ ಸಾಧಿಸಬಹುದು ಎಂದು ಅವರು ಹೇಳಿದರು.

ಜೈವಿಕ ಘಟಕ ಸ್ಥಾಪಿಸಿ ಉತ್ಪಾನೆಯಾದ ಇಂಧನವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತೆ, ಸಾಂಪ್ರದಾಯಕ ಇಂಧನ ಮೂಲಗಳ ಬಳಕೆಯಿಂದ ಪೆಟ್ರೋಲಿಯಂ ಆಮದಿಗೆ ಖರ್ಚಾಗುತ್ತಿರುವ ಬಜೆಟ್‌ನ ಶೇ.30ರಷ್ಟು ಹಣವನ್ನು ಉಳಿಸಬಹುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

### ಜೈವಿಕ ಇಂಧನಕ್ಕೆ ಪ್ರೋತ್ಸಾಹ – ಶ್ರೀ ಯಡಿಯೂರಪ್ಪ

ಜೈವಿಕ ಇಂಧನ ಮೂಲಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ರಾಜ್ಯದಲ್ಲಿ ಒಂದು ಲಕ್ಷ ಎಕರೆ ಭೂ ಪ್ರದೇಶದಲ್ಲಿ ಹೊಂಗೆ, ಬೇವು, ಸೇರಿದಂತೆ ಜೈವಿಕ ಇಂಧನ ಮೂಲದ ಸಸಿಗಳನ್ನು ಬೆಳೆಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಈ ಸಂದರ್ಭದಲ್ಲಿ ತಿಳಿಸಿದರು.

ಈ ಮಳೆಗಾಲದಲ್ಲಿ ಒಂದು ಲಕ್ಷ ಎಕರೆ ಬಂಜರು ಭೂಮಿಯಲ್ಲಿ ಜತ್ರೋಪ, ಹೊಂಗೆ, ಬೇವು ಮತ್ತಿತರ ಇಂಧನ ಮೂಲದ ಗಿಡಗಳನ್ನು ನಡೆಲಾಗುವುದು ಹಾಗೂ ಖಾಸಗಿ ಭೂಮಿಯಲ್ಲಿ ಈ ಮರಗಳನ್ನು ಬೆಳೆಯುವಂತೆ ರೈತರಿಗೆ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುವುದಾಗಿ ಅವರು ಹೇಳಿದರು.

ಪರ್ಯಾಯ ಇಂಧನ ಮೂಲಗಳಿಗೆ ಅದರಲ್ಲೂ ಜೈವಿಕ ಇಂಧನ ಬಳಕೆ ದೃಷ್ಟಿಯಿಂದ ರಾಜ್ಯ ಸರ್ಕಾರ ಈಗಾಗಲೇ ಹಸಿರು ಹೊನ್ನು, ಬರಡು ಭೂಮಿ ವಿಶೇಷ ಯೋಜನೆ ಹಾಗೂ ಅರಣ್ಯ ಸಂರಕ್ಷಣೆ, ವನ್ಯ ಜೀವಿಗಳ ಸಂರಕ್ಷಣೆ ಹೀಗೆ ಅನೇಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಕ್ರಮ ಕೈಗೊಂಡಿದೆ ಎಂದು ಅವರು ಹೇಳಿರು.

ಇದರ ಜೊತೆಗೆ ಪಶ್ಚಿಮ ಘಟ್ಟಗಳ ಕಾರ್ಯಪಡೆ ಹಾಗೂ ರಾಷ್ಟ್ರದಲ್ಲೇ ಮೊದಲ ಬಾರಿಗೆ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಮೂಲಕ ಜೈವಿಕ ಇಂಧನ ಉತ್ಪಾದನೆಗೆ ಪೂರಕವಾದ ಕಾರ್ಯಕ್ರಮಗಳನ್ನು ಸೃಷ್ಟಿಸಲಾಗಿದೆ ಎಂದು ಅವರು ನುಡಿದರು.

ಗುಲ್ಬರ್ಗಾ ಮತ್ತು ಹಾಸನದಲ್ಲಿ ಜೈವಿಕ ಇಂಧನ ಪಾರ್ಕ್‌ನ್ನು ಸ್ಥಾಪಿಸಿದ್ದು, ಇಲ್ಲಿ ಜೈವಿಕ ಇಂಧನಕ್ಕೆ ಬೇಕಾಗುವ ಗಿಡಗಳನ್ನು ಬೆಳೆಯಲು ರೈತರಿಗೆ ಐದು ಸಾವಿರ ರೂ.ಗಳ ಅನುದಾನ ನೀಡಿ ಪೋತ್ಸಾಹ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಸಮಾರಂಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಶ್ರೀ ಕೆ.ಎಸ್.ಈಶ್ವರಪ್ಪ, ಗೃಹ ಮತ್ತು ಸಾರಿಗೆ ಸಚಿವ ಶ್ರೀ ಆರ್.ಆಶೋಕ್, ಗ್ರಾಮೀಣಾಭಿವೃದ್ಧಿ ಸಚಿವ ಶ್ರೀ ಜಗದೀಶ್ ಶೆಟ್ಟರ್, ಉನ್ನತ ಶಿಕ್ಷಣ ಸಚಿವ ಶ್ರೀ ಡಾ.ವಿ.ಎಸ್.ಆಚಾರ್ಯ, ರಾಷ್ಟ್ರೀಯ ಜೈವಿಕ ಘಟಕದ ಅಧ್ಯಕ್ಷ ಶ್ರೀ ಅಣ್ಣ ಸಾಹೇಬ್ ಪಾಟೀಲ್, ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ರಾಮಕೃಷ್ಣ, ರಾಜ್ಯ ಬಿಜೆಪಿ ಜೈವಿಕ ಇಂಧನ ಪ್ರಕೋಷ್ಠ ಸಂಚಾಲಕ ಶ್ರೀ ಜೆ.ಟಿ. ರಾಜಶೇಖರ ಸೇರಿದಂತೆ ಆನೇಕ ಗಣ್ಯರು ಉಪಸ್ಥಿತರಿದ್ದರು. ●

# ರಾಜ್ಯಸಭೆಗೆ ಶ್ರೀಮತಿ ಹೇಮಾಮಾಲಿನಿ ಆಯ್ಕೆ

ನಿರೀಕ್ಷೆಯಂತೆ ಚಿತ್ರನಟಿ ಶ್ರೀಮತಿ ಹೇಮಾಮಾಲಿನಿ ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಹಾಗೂ ಜೆಡಿಎಸ್ ಬೆಂಬಲಿತ ಪಕ್ಷೇತರ ಅಭ್ಯರ್ಥಿಯೂ ಆದ ಸಾಹಿತಿ ಡಾ. ಮರುಳಶಿದ್ದಪ್ಪ ವಿರುದ್ಧ ಜಯಗಳಿಸಿ ರಾಜ್ಯದಿಂದ ರಾಜ್ಯಸಭೆ ಪ್ರವೇಶಿಸಿದರು. ಶ್ರೀಮತಿ ಹೇಮಾಮಾಲಿನಿಗೆ ಬಿಜೆಪಿಯ ಹಾಗೂ ಪಕ್ಷೇತರ ಶಾಸಕ ಶ್ರೀ ವರ್ತೂರು ಪ್ರಕಾಶ್‌ರವರ ಮತವೂ ಸೇರಿ ಒಟ್ಟು 105 ಮತಗಳು ಚಲಾವಣೆಯಾಗಿ ಮೊದಲ ಸುತ್ತಿನಲ್ಲೇ ಮುನ್ನಡೆ ಸಾಧಿಸಿದರು. ಇದರಿಂದಾಗಿ ಎರಡನೇ ಸುತ್ತಿನ ಎಣಿಕೆ ಮಾಡುವ ಸ್ಥಿತಿ ಉದ್ಭವಿಸಲಿಲ್ಲ. ಡಾ. ಮರುಳಶಿದ್ದಪ್ಪನವರಿಗೆ ಪ್ರತಿಪಕ್ಷಗಳ ಒಟ್ಟು 98 ಮತಗಳಲ್ಲಿ 94 ಮತಗಳು ಮಾತ್ರ ಬಿದ್ದವು.

**ರಾಜ್ಯದ ಅಭಿವೃದ್ಧಿಗೆ ಶ್ರಮಿಸುವೆ:** ಕಲೆ, ಸಂಗೀತ ಕ್ಷೇತ್ರಗಳಲ್ಲಿರುವವರಿಗೆ ಯಾವುದೇ ರಾಜ್ಯ ಅಥವಾ ಭಾಷೆಯ ಗಡಿ ಇರುವುದಿಲ್ಲ. ನಾವುಗಳು ಇಡೀ ದೇಶಕ್ಕೆ ಸೇರಿದ್ದೇವೆ. ಇದನ್ನು ಪರಿಗಣಿಸಿ ಕರ್ನಾಟಕದ ಶಾಸಕರು ತಮಗೆ ಮತ ಹಾಕಿದ್ದಾರೆ. ಅದಕ್ಕೆ ಅಭಿನಂದನೆ ಸಲ್ಲಿಸುವ ಜೊತೆಗೆ ಮುಂದಿನ ದಿನಗಳಲ್ಲಿ ರಾಜ್ಯದ ಸಮಸ್ಯೆಗಳ ಬಗ್ಗೆ ರಾಜ್ಯಸಭೆಯಲ್ಲಿ ದನಿ ಎತ್ತುವ ಕೆಲಸ ಮಾಡುವೆ ಎಂದು ರಾಜ್ಯಸಭೆ ಸದಸ್ಯೆ ಶ್ರೀಮತಿ ಹೇಮಾಮಾಲಿನಿ ಹೇಳಿದರು. ●

# ಕೃಷಿ ಬಜೆಟ್ – ಸ್ವಾಗತಾರ್ಹ

–ಶ್ರೀ ಬಿ.ಜಿ. ಬಣಕಾರ್, ಮಾಜಿ ವಿಧಾನಸಭಾಧ್ಯಕ್ಷರು

ಹುಟ್ಟು ಹೋರಾಟಗಾರ ಕೃಷಿ ವಂಶಜ, ರೈತರ ಹಿತಚಿಂತಕ–ಚಿರಚಿಂತಕ ಸಾಮಾಜಿಕ ಕಳಕಳಿಯ ರಾಜ್ಯದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಬೂಕನೂರಿನ ಭೂಪ. ಅವರು ಸಾಮಾನ್ಯರಾರೂ ಊಹಿಸದ ಬಹುರೂಪಿ ಬಜೆಟ್ 2011–12ನೇದ್ದನ್ನು 24.02.2011ರಂದು ಕರ್ನಾಟಕ ವಿಧಾನಸಭೆಯಲ್ಲಿ ಮಂಡಿಸಿ ಐತಿಹಾಸಿಕ ಆಯವ್ಯಯವನ್ನು ರಾಜ್ಯದ ಜನತೆಯ ಮುಂದಿಟ್ಟಿದ್ದಾರೆ. ಇದನ್ನು ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು, ವಿಧಾನಸಭೆ, ವಿಧಾನಪರಿಷತ್‌ನಲ್ಲಿ ವಿರೋಧ ಪಕ್ಷಗಳ ನಾಯಕರೂ ಹಾಗೂ ರಾಜ್ಯದ ಜನತೆ ಶ್ಲಾಘಿಸಲೇಬೇಕಲ್ಲದೆ ಈ ಬಜೆಟ್ ಅನುಷ್ಠಾನಗೊಂಡು ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿ ಪರಿಣಾಮಕಾರಿಯಾಗಿ ಆಗಲೇಬೇಕು. ಮುಖ್ಯಮಂತ್ರಿಗಳೂ ಕೂಡಾ ಅತ್ಯುತ್ತಮ ಬಜೆಟ್ ಮಂಡಿಸಿದರಷ್ಟೇ ಸಾಲದು. ಮಂಡಿಸಿದ ಬಜೆಟ್ ವಾಸ್ತವಿಕವಾಗಿ ಅನುಷ್ಠಾನಗೊಂಡು ನಿಗದಿತ ಹಾಗೂ ನಿರ್ದಿಷ್ಟ ಯೋಜನಾ ಹಾಗೂ ಯೋಜನೇತರ ಕಾರ್ಯಕ್ರಮಗಳು ಯಶಸ್ವಿಯಾಗಿ ಆರ್ಥಿಕವಾಗಿ ಹಾಗೂ ಭೌತಿಕವಾಗಿ ಗುರಿಯನ್ನು ಹೊಂದುವಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅಂದರೆ ಮಾತ್ರ ಆದರ್ಶ ಅತ್ಯುತ್ತಮ ಐತಿಹಾಸಿಕ ಬಜೆಟ್ ಮಂಡಿಸಿದ್ದು ಸಾರ್ಥಕ. ರಾಜ್ಯದ ಶಾಶ್ವತ ಆದಾಯ ಹಳ್ಳಿಯ ಒಬ್ಬ ಅಂಗವಿಕಲ, ವೃದ್ದಾಪ್ಯ, ವಯೋವೃದ್ಧ, ಕೂಲಿಯಿಂದ ಹಿಡಿದು ರಾಜ್ಯದ ರಾಜಧಾನಿ ಬೆಂಗಳೂರು ನಗರದ ಮುಖ್ಯಮಂತ್ರಿ ರಾಜ್ಯಪಾಲರಾದಿಯಾಗಿ 6.50 ಕೋಟಿ ಪ್ರಜೆಗಳಿಂದ ಹರಿದು ಬೆಂಗಳೂರು ಖಜಾನೆಗೆ ಬಂದು ತಿರುಗಿ ರಾಜ್ಯಪಾಲರನ್ನು ಹಿಡಿದು ಮುಖ್ಯಮಂತ್ರಿಯಾದಿಯಾಗಿ ರಾಜ್ಯದ 6.50 ಕೋಟಿ ಜನತೆಗೆ ಅವರ ಆರ್ಥಿಕ, ಸಾಮಾನ್ಯ, ಸಾಮಾಜಿಕ ಅಭ್ಯುದಯಕ್ಕೆ ವೆಚ್ಚವಾಗುತ್ತಿದೆ. ಈ ವೆಚ್ಚ ಸಾರ್ಥಕ ಹಾಗೂ ಸಮರ್ಪಕವಾಗಬೇಕಾಗುತ್ತದೆ. ಈ ಯಾವುದೇ ಹಣವು ದುರುಪಯೋಗವಾಗಬಾರದು, ದುರ್ವೆಚ್ಚವಾಗಬಾರದು, ದುರ್ಬಳಕೆಯಾಗಬಾರದು, ನಿರ್ಬಳಕೆಯಾಗಬಾರದು, ದುಂದುವೆಚ್ಚವಾಗಬಾರದು, ಸಂಪೂರ್ಣವಾಗಿ ಸದ್ಬಳಕೆಯಾಗಲೇಬೇಕು. ಈ ಹಿಂದೆ ಆಗಬಾರದ ಅವ್ಯವಹಾರ, ಆಗಬಾರದ ಅಕ್ರಮಗಳು, ಆಗಬಾರದ ಹಗರಣಗಳು, ಆಗಬಾರದ ಎಲ್ಲಾ ಆಗಿವೆ. ಇದಕ್ಕೆ ಎಲ್ಲರೂ ತಡೆಹಾಕಲೇಬೇಕು ಅಂದರೆ ಮಾತ್ರ ಪ್ರಜಾರಾಜ್ಯ ರಾಮರಾಜ್ಯದತ್ತ ಸಾಗಬಹುದಾಗಿದೆ. ಭಾರತ ದೇಶದಲ್ಲಿಯೇ ಪ್ರಪ್ರಥಮವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು 2011–12ರ ಕೃಷಿ ಬಜೆಟ್, ಕೃಷಿ ಆಯವ್ಯಯ ಮಂಡಿಸಿದ್ದಾರೆ. ರಾಜ್ಯದಲ್ಲಿ ಜನಸಂಖ್ಯೆಯಲ್ಲಿ ಶೇ. 80 ರಷ್ಟು ಜನರು ಕೃಷಿಕರಿದ್ದಾರೆ. ರಾಜ್ಯದ ಎಲ್ಲಾ 6.50 ಕೋಟಿ ಜನರಿಗೆ ಈ ಕೃಷಿಕರು ಅನ್ನ ಹಾಗೂ ಏನೆಲ್ಲಾ ದಾತಾರರು. ಇವರ ಬಾಳು ಪ್ರಗತಿದಾಯಕವಾಗಬೇಕು. ಈ ದಿಸೆಯಲ್ಲಿ ಕೃಷಿಕರ ಏಳ್ಗೆಗಾಗಿ ಪ್ರತ್ಯೇಕ 17856.97 ಕೋಟಿ ಬಜೆಟ್ ಮುಂದಿಟ್ಟಿದ್ದಾರೆ.

- ಕೃಷಿವಲಯದ 73 ಯೋಜನೆಗಳಿಗೆ 2584.45 ಕೋಟಿ.
- ತೋಟಗಾರಿಕೆಯ 25 ಯೋಜನೆಗಳಿಗೆ 3179.44 ಕೋಟಿ.
- ಪಶುಸಂಗೋಪನೆಯ 43 ಯೋಜನೆಗಳಿಗೆ 883.03 ಕೋಟಿ.
- ಮೀನುಗಾರಿಕೆಯ 26 ಯೋಜನೆಗಳಿಗೆ 1077.43 ಕೋಟಿ.
- ಸಹಕಾರ ಇಲಾಖೆಯ 24 ಯೋಜನೆಗಳಿಗೆ 557.84 ಕೋಟಿ.
- ಸಮಾಜ ಕಲ್ಯಾಣ ಇಲಾಖೆಯ 4 ಯೋಜನೆಗಳಿಗೆ 177.89 ಕೋಟಿ.
- ಕಂದಾಯ ಇಲಾಖೆಯ 4 ಯೋಜನೆಗಳಿಗೆ 212.97 ಕೋಟಿ.
- ರೇಷ್ಮೆ ಮತ್ತು ಸಕ್ಕರೆ ಇಲಾಖೆಯ 23 ಯೋಜನೆಗಳಿಗೆ 397.53 ಕೋಟಿ.
- ಭಾರೀ ನೀರಾವರಿ ಇಲಾಖೆಯ 54 ಯೋಜನೆಗಳಿಗೆ 7799.86 ಕೋಟಿ.
- ಸಣ್ಣ ನೀರಾವರಿ ಇಲಾಖೆಯ 33 ಯೋಜನೆಗಳಿಗೆ 7799.86 ಕೋಟಿ.
- ಇಂಧನ ಇಲಾಖೆಯ 2 ಯೋಜನೆಗಳಿಗೆ 4400.00 ಕೋಟಿ.
- ಇತರ ವಲಯಗಳ 4 ಯೋಜನೆಗಳಿಗೆ 53.01 ಕೋಟಿ.

ಹೀಗೆ 12 ಇಲಾಖೆ ಅಥವಾ ಅಭಿಯಾಚನೆಗಳ 315 ಯೋಜನೆ ಅಥವಾ ಕಾರ್ಯಕ್ರಮಗಳಿಗೆ 17855.97 ಕೋಟಿ. ಯೋಜನೆ ಹಾಗೂ ಯೋಜನೇತರ ಮೊತ್ತವನ್ನು 01–04–2011 ರಿಂದ 31–03–2012ರವರೆಗಿನ 12 ತಿಂಗಳಲ್ಲಿ ಸರಿಸಮವಾಗಿ ವೆಚ್ಚ ಮಾಡಿ ನಿಗದಿತ ಹಾಗೂ ಉದ್ದೇಶದ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಂಬಂಧಿಸಿದ ಮಂತ್ರಿಗಳು ಹಾಗೂ ಅಧಿಕಾರಿಗಳು ಸಾಧಿಸಲೇಬೇಕಾಗಿದೆ. ಲೇಖಾನುದಾನದ ಪ್ರಕಾರ ಪ್ರತಿ ತಿಂಗಳಿಗೆ 1488.00 ಕೋಟಿ ಯಂತೆ ಮೊದಲನೆಯ 3 ತಿಂಗಳು ತ್ರೈಮಾಸಿಕ ಅವಧಿಯಲ್ಲಿ 4464.00 ಕೋಟಿ ಮೊತ್ತವನ್ನು, ಲೇಖಾನುದಾನದ ಪ್ರಕಾರ ವರ್ಷದ ಮೊದಲನೆ 4 ತಿಂಗಳ ಅವಧಿಯಲ್ಲಿ 5952.00 ಕೋಟಿ ಮೊತ್ತವನ್ನು ವೆಚ್ಚ ಮಾಡಲೇಬೇಕು. ಪ್ರತೀ ತಿಂಗಳ ಇಲ್ಲವೇ 3 ಆರ್ಥಿಕ ತಿಂಗಳ, 4 ಆರ್ಥಿಕ ತಿಂಗಳ, 6 ಆರ್ಥಿಕ ತಿಂಗಳ, 9 ಆರ್ಥಿಕ ತಿಂಗಳ ಹಾಗೂ 12 ತಿಂಗಳ ವಾರ್ಷಿಕ ಆರ್ಥಿಕ ಹಾಗೂ ಭೌತಿಕ ಸಾಧನೆಯ ಸಾಧನ ವಿಜಯೋತ್ಸವವನ್ನು ಸರ್ಕಾರ ಗ್ರಾಮ, ತಾಲ್ಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯಮಟ್ಟದಲ್ಲಿ ವಿಜೃಂಭಣೆಯಿಂದ ಆಚರಿಸಿ ಜನತೆಗೆ ಅಭಿವೃದ್ಧಿ ಸಾಧನೆಯ ಅರಿವು ಮಾಡಿಕೊಟ್ಟರೆ ಅದು ಸರ್ಕಾರ ಸಾಧನೆಯ ಸಾರ್ಥಕ.

ಹೊಸ ಕೃಷಿ ಬಜೆಟ್‌ನಲ್ಲಿರುವ 12 ಯೋಜನೆಗಳಲ್ಲಿ 2006–07 ಮತ್ತು 2007–08 ಹಾಗೂ 2008–09ರ ಮೂರು

ವರ್ಷದ ಅವಧಿಯಲ್ಲಿ ಸಿಎಜಿ ವರದಿ ಪ್ರಕಾರ 18844.7 ಕೋಟಿ ಮೊತ್ತವನ್ನು ಬಳಸದೆ ಉಳಿಸಲಾಗಿದೆ. ಸಿಎಜಿ ವರದಿ ಪ್ರಕಾರ ಹಾಗೂ ಸರ್ಕಾರಿ ಮಾಹಿತಿ ಪ್ರಕಾರ ಕೃಷಿ ಬಜೆಟ್‌ನಲ್ಲಿ ಬರುವ 12 ಅಭಿಯೋಜನೆಗಳನ್ನೊಳಗೊಂಡ ಜನರಲ್ ಬಜೆಟ್‌ನಲ್ಲಿಯ 29 ಯೋಜನೆಗಳಲ್ಲಿ 2008-09ರಲ್ಲಿ 13660.00 ಕೋಟಿ, 2009-10ರಲ್ಲಿ 11878.00 ಕೋಟಿ ಮೊತ್ತವನ್ನು ಬಳಸದೆ ಉಳಿಸಲಾಗಿದೆ. ಈ ವೈಫಲ್ಯಕ್ಕೆ ಜವಾಬ್ದಾರಿ ಆಯಾ ಇಲಾಖೆಯ ಮಂತ್ರಿಗಳು ಹಾಗೂ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳೇ ಆಗಿರುವುದು ಸುಸ್ಪಷ್ಟ.

ಕೃಷಿ ಬಜೆಟ್ ಜಾರಿಯಾಗಿ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಬೇಕಾದಲ್ಲಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ಮಂತ್ರಿಮಂಡಲದಲ್ಲಿರುವ ಮಂತ್ರಿಗಳಾದ ಸರ್ವಶ್ರೀ ಉಮೇಶ ಕತ್ತಿ, ಎಸ್.ಎ. ರವೀಂದ್ರನಾಥ, ರೇವೂನಾಯಕ್ ಬೆಳಮಗಿ, ಕೃಷ್ಣ ಪಾಲೇಮಾರ್, ಲಕ್ಷ್ಮಣ ಸವದಿ, ನಾರಾಯಣಸ್ವಾಮಿ, ಕರುಣಾಕರ ರೆಡ್ಡಿ, ಬಿ.ಎನ್. ಬಚ್ಚೇಗೌಡ, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ಕು. ಶೋಭಾ ಕರಂದ್ಲಾಜೆಯವರ ಹಾಗೂ ಇತರ ಇಲಾಖಾ ಕಾರ್ಯದರ್ಶಿಗಳ ಜವಾಬ್ದಾರಿ, ಕರ್ತವ್ಯ ನಿಷ್ಠೆ, ಕ್ರೀಯಾಶೀಲತೆಯನ್ನು ಅವಲಂಬಿಸಿದ್ದು ಈ ಬಗ್ಗೆ ರಾಜ್ಯದ ಕ್ಷೇತ್ರಗಳ ಶಾಸಕರು, ವಿರೋಧ ಪಕ್ಷಗಳ ನಾಯಕರು ಜಾಗೃತರಾಗಿ ಪ್ರಜಾರಾಜ್ಯದ ಸರ್ವತೋಮುಖ ಅಭಿವೃದ್ಧಿ ಹಾಗೂ ಸರ್ವೋನ್ನತ ಆಡಳಿತದ ಬಗ್ಗೆ ಚಿಂತಿಸಿ ಕಾರ್ಯೋನ್ಮುಖರಾದರೆ ಒಳ್ಳೆಯದು. ಈ ಹಿಂದೆ ಯೋಜನೆಗಳ ಕಾರ್ಯಾಚರಣೆಯಲ್ಲಿ ತೋಟಗಾರಿಕೆ, ಕೃಷಿ, ರೇಷ್ಮೆ ಮುಂತಾದ ಇಲಾಖೆಗಳಲ್ಲಿಯ ಪ್ರಯೋಜನಗಳು ಅನೇಕ ಅನರ್ಹರಿಗೆ ಸಿಕ್ಕಿದ್ದು ಅರ್ಹರನ್ನು ದೂರ ಸರಿಸಲಾದ ಉದಾಹರಣೆ ರಾಜ್ಯದಲ್ಲಿ ಸಾಕಷ್ಟು ಇವೆ. ಇದು ನಿಲ್ಲಲೇಬೇಕು. ಕೃಷಿ ಬಜೆಟ್ ಯೋಜನೆಗಳು ಜನಪರ, ಜನ ಪ್ರಗತಿದಾಯಕವಾಗಿದ್ದು ಅವುಗಳ ಪ್ರಯೋಜನ ಗ್ರಾಮಾಂತರ ಜನ ಸಮುದಾಯಕ್ಕೆ ಸಲ್ಲುತ್ತಿದ್ದು ಈ ಪ್ರಯೋಜನಗಳ ಹೆಸರು ಹಾಗೂ ಪ್ರಯೋಜನದಾರರ ಹೆಸರುಗಳನ್ನು ಪ್ರತೀ 3 ತಿಂಗಳಿಗೊಮ್ಮೆ ಕರೆಯಲೇಬೇಕಾದ ಆಯಾ ಅವಧಿಯ ಗ್ರಾಮಸಭೆಗಳಲ್ಲಿ ಸಾದರ ಪಡಿಸಿದರೆ ಶ್ರೀ ಯಡಿಯೂರಪ್ಪರವರ ಪರಿಶ್ರಮ ಹಾಗೂ ಪ್ರಗತಿಯ ಉದ್ದೇಶ ಸಫಲವಾದೀತು ಹಾಗೂ ಪಂಚಾಯತ್ ರಾಜ್ ರಾಮರಾಜ್ಯದತ್ತ ಸಾಗಲು ಅನುಕೂಲವಾದೀತು. ●

# ಕಾರ್ಕಳದಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಸಮಾವೇಶ

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಅಲ್ಪಸಂಖ್ಯಾತ ಮೋರ್ಚಾ ಸಮಾವೇಶ ಕಾರ್ಕಳದ ಗ್ಯಾಲಕ್ಸಿ ಸಭಾಂಗಣದಲ್ಲಿ ಮಾರ್ಚ್ 5ರಂದು ಅದ್ದೂರಿಯಾಗಿ ಬೃಹತ್ ಮಟ್ಟದಲ್ಲಿ ಜರುಗಿತು. ಸುಮಾರು 2000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಮಹಿಳೆಯರು, ಪುರುಷರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಕಳ ಕ್ಷೇತ್ರ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾದ ಶ್ರೀ ಮೌರಿನ್ ಮೆಂಡೋನ್ಸಾರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನು ರಾಜ್ಯ ಹಜ್ ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗಳ ಸಚಿವರಾದ ಪ್ರೊ. ಮುಮ್ತಾಜ್ ಅಲಿಖಾನ್‌ರವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಅಲ್ಪಸಂಖ್ಯಾತರ ಅಭಿವೃದ್ಧಿಗೆ ಬಜೆಟ್‌ನಲ್ಲಿ 79 ಕೋಟಿ ರೂ. ಬಿಡುಗಡೆ ಮಾಡಿದ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು ಕ್ರೈಸ್ತ ಜನಾಂಗಕ್ಕೆ 50 ಕೋಟಿ ರೂ. ಸೇರಿದಂತೆ ಅಲ್ಪಸಂಖ್ಯಾತರಿಗೆ 326 ಕೋಟಿ ರೂ. ಬಿಡುಗಡೆ ಮಾಡಿ ಸಾಧನೆಗೈದಿದ್ದಾರೆ ಎಂದು ನುಡಿದರು.

ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾದ ಶ್ರೀ ಅನ್ವರ್ ಮಾನಿಪ್ಪಾಡಿಯವರು ಅಲ್ಪಸಂಖ್ಯಾತರಿಗಾಗಿ ಬಿಜೆಪಿಯೇತರ ಸರಕಾರಗಳು ಮಾಡಿದ ಸಾಧನೆಗಳ ಅಂಕಿಅಂಶಗಳನ್ನು ನೀಡುತ್ತಾ, ಅಲ್ಪಸಂಖ್ಯಾತರ ಉದ್ಧಾರಕರು ನಾವೆಂದು ಹೇಳುವ ಕಾಂಗ್ರೆಸ್ಸಿಗರ ಮಾತು ಎಳ್ಳಷ್ಟು ಸತ್ಯವಿಲ್ಲವೆಂದು ನುಡಿದರು. ಇದೇ ಸಂದರ್ಭದಲ್ಲಿ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಎನ್.ಬಿ. ಅಬೂಬ್‌ಕರ್‌ರವರು ಯೋಜನೆಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡುತ್ತಾ ಕಾರ್ಯಕರ್ತರು ಸಹಕಾರಿ ಸವಲತ್ತುಗಳನ್ನು ನೇರವಾಗಿ ಅರ್ಹರಿಗೆ ತಲುಪಿಸುವ ಪಣ ತೊಟ್ಟಾಗ ಉತ್ತಮವಾದ ಪಕ್ಷ ಸಂಘಟನೆಯು ಸಾಧ್ಯ. ಅದಕ್ಕೆ ಉಡುಪಿ ಜಿಲ್ಲೆ ಮಾದರಿಯಾಗಿದೆ ಎಂದು ಹೇಳಿದರು.

ಉಡುಪಿ ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾದ ಶ್ರೀ ಸಲೀಂ ಅಂಬಾಗಿಲುರವರು ಮಾತನಾಡಿ ರಾಜ್ಯದಲ್ಲಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಬಂದ ಮೇಲೆ ಅಲ್ಪಸಂಖ್ಯಾತ ಬಾಂಧವರು ಸ್ವಾವಲಂಬಿ ಬದುಕನ್ನು ಸಾಗಿಸುವಂತಾಗಿದ್ದು ಕಾರ್ಯಕರ್ತರಾದ ನಮಗೆ ಹೆಮ್ಮೆ ತರುವಂತದ್ದಾಗಿದೆ. ಅಷ್ಟೇ ಅಲ್ಲದೇ ಈ ಬಾರಿಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಸುಮಾರು 397 ಕೋಟಿ ರೂ.ಗಳ ಅನುದಾನವನ್ನು ಮೀಸಲಿಟ್ಟಿರುವುದಕ್ಕಾಗಿ ಕೃತಜ್ಞತೆ ಹಾಗೂ ಅಭಿನಂದನೆಯನ್ನು ಸಲ್ಲಿಸಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಕೆ. ಉದಯ್‌ಕುಮಾರ್ ಶೆಟ್ಟಿ ಸಮಾವೇಶದ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ ಜಿಲ್ಲಾ ಮಟ್ಟದಲ್ಲಿ ಇಂತಹ ಸಮಾವೇಶಗಳನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಿದರು. ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷರಾ ಶ್ರೀ ಸುನೀಲ್‌ಕುಮಾರ್‌ರವರು ಮಾತನಾಡಿ ರಾಜ್ಯದಲ್ಲಿಯೇ ಮೊದಲಬಾರಿಗೆ ಹಮ್ಮಿಕೊಂಡ ಅಲ್ಪಸಂಖ್ಯಾತರ ತಾಲ್ಲೂಕು ಸಮಾವೇಶದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಶ್ರೀ ಮೌರಿನ್ ಮೆಂಡೋನ್ಸಾ ಅವರು ವೈಯಕ್ತಿಕವಾಗಿ ಸುಮಾರು 200 ಕುಟುಂಬಗಳಿಗೆ ವಾರ್ಷಿಕ ಉಚಿತ ಅಪಘಾತವಿಮೆಯನ್ನು ಕೊಡುಗೆಯಾಗಿ ನೀಡಿದರು. ಅಂತರ್‌ರಾಷ್ಟ್ರೀಯ ಕರಾಟೆಪಟು ಶ್ರೀ ಸಲೀಂ ಜಾವೇದ್ ಅವರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು. ●